# ಸಂಕೇತಿ ವಾರ್ತಾ

ಬೆಟ್ಟದಪುರ ಸಂಕೇತಿ ಸಂಘದ ಮಾಸಪತ್ರಿಕೆ

ಶ್ರೀ ತಾರಣ ಸಂ।। ಆಶ್ವಯುಜ ಮಾಸ — ಸಂಪುಟ - ೧೯

ಅಕ್ಟೋಬರ್ - ೨೦೦೪ — ಸಂಚಿಕೆ - ೧೦


## ಗುರು ಶಿಷ್ಯರ ಸಂವಾದ

ತ್ರಿಕಾಲಜ್ಞಾನಿಯೋರ್ವರು ತಮ್ಮ ಶಿಷ್ಯನ ಜೊತೆಯಲ್ಲಿ ಒಂದೂರಿಗೆ ಸಂಚರಿಸುತ್ತಿದ್ದರು. ಎದುರುಗಡೆಯಿಂದ ಬರುತ್ತಿದ್ದ ಅಲ್ಲಿನ ರಾಜ ಈ ಜ್ಞಾನಿ ಶ್ರೇಷ್ಠರಿಗೆ ಪಾದ ಮುಟ್ಟಿನಮಸ್ಕರಿಸಿದ. ಪ್ರತಿಯಾಗಿ 'ದೀರ್ಘಾಯುಷ್ಮಾನ್ ಭವ' ಎಂಬುದಾಗಿ ಆತ ಹರಸಲ್ಪಟ್ಟ, ಸ್ವಲ್ಪ ದೂರ ಸಾಗಿದಾಗ ಆಚಾರವಂತನಾಗಿರುವಂತೆ ಕಂಡ ತೇಜಸ್ಸಿನಿಂದ ಕೂಡಿದ ಬ್ರಾಹ್ಮಣ ಬಾಲಕನೊಬ್ಬನೂ ಈ ಜ್ಞಾನಿಯ ಅಡಿಗೆರಗಿದಾಗ ''ನೀನು ಈಗಲೇ ಮರಣಹೊಂದು'' ಎಂಬುದಾಗಿ ಅವರ ಮುಖದಿಂದ ಹೊರಟ ಮಾತುಗಳು. ಮುಂದೆ ಸಾಧಕನೂ ವಿರಕ್ತನಂತೆ ಕಂಡು ಬಂದ ಯೋಗಿಯೊಬ್ಬನೂ ಈ ಜ್ಞಾನಿಯ ಕಾಲಿ ಬಿದ್ದಾಗ ಆತನನ್ನು ಉದ್ದೇಶಿಸಿ, ''ನೀನು ಬದುಕಿದರೂ ಮರಣ ಹೊಂದಿದರೂ ಒಂದೇ'' ಎಂಬ ಸಂದೇಶ ನೀಡಿ ಮುಂದುವರಿದರು. ಕೊನೆಯಲ್ಲಿ ಆ ದಾರಿಯಲ್ಲಿ ಬೇಡರವನೊಬ್ಬ ತಾನು ಕೊಂಡ ಪ್ರಾಣಿಯನ್ನು ಹಿಡಿದುಕೊಂಡು ಬರುತ್ತಿದ್ದಂತೆ. ಆತನಿಗೂ ಈ ಜ್ಞಾನಿಯ ಕಾಲಿಗೆ ಎರಗಬೇಕೆಂದು ಕಂಡು ಬಂದು, ಅಡ್ಡಬಿದ್ದ. ಆಗ ''ನೀನು ಸತ್ತು ಬದುಕು'' ಎಂಬ ನುಡಿಗಳು ಹೊರಟವು. ಅನಂತರ ಗುರು ಶಿಷ್ಯ ಈರ್ವರೂ ವಿಶ್ರಾಂತಿಗಾಗಿ ಒಂದು ಮರದ ಕೆಳಗೆ ಕುಳಿತರು.

ಶಿಷ್ಯ ಬಿನ್ನವಿಸಿಕೊಂಡ, ''ಗುರುಗಳೇ ಆ ನಾಲ್ಕು ಜನರು ತಮಗೆ ನಮಸ್ಕರಿಸಿದಾಗ ವಿಚಿತ್ರ - ವಿಭಿನ್ನ ರೀತಿಯಲ್ಲಿ ಪ್ರತಿಕ್ರಿಯಿಸಿದಿರಿ. ಇದರ





ಅಂತರಾರ್ಥವೇನೆಂದು ದಯವಿಟ್ಟು ತಿಳಿಸಬೇಕು''. ಆಗ ಆ ಜ್ಞಾನಿ ಶ್ರೇಷ್ಠರು ಕ್ರಮವಾಗಿ ಉತ್ತರಿಸಿದುದು ಹೀಗೆ : ''ತನ್ನ ರಾಜ್ಯದಲ್ಲಿನ ದುಷ್ಟರನ್ನು ಶಿಕ್ಷಿಸದೆ, ತನ್ಮೂಲಕ ನಿರಪರಾಧಿ ಸಜ್ಜನರನ್ನು ಸಂರಕ್ಷಿಸಬೇಕಾದ ಕರ್ತವ್ಯ ಹೊಣೆಗಾರಿಕೆಯಿಂದ ರಾಜ ವಿಮುಖನಾಗಿದ್ದಾನೆ. ಈ ಚ್ಯುತಿಗಾಗಿ ಆತನಿಗೆ ಮುಂದಿನ ಜನ್ಮದಲ್ಲಿ ತಕ್ಕ ಶಿಕ್ಷೆ ಕಾದಿದೆ. ಈ ಜನ್ಮದಲ್ಲಾದರೂ ಪ್ರಾಪ್ತವಾದ ಸುಖವನ್ನು ಅನುಭವಿಸಲಿ ಎಂದು ಆತನಿಗೆ ಪೂರ್ಣಾಯಸ್ಸು ಬಯಸಿದೆ''. ''ತನ್ನ ಸಣ್ಣವಯಸ್ಸಿನಲ್ಲೇ ಆ ಬಾಲಕ ನಿಷ್ಠೆಯಿಂದ ಜೀವಮಾನದ ಅಧ್ಯಾತ್ಮ ಸಾಧನೆಯನ್ನು ಮುಗಿಸಿ, ಮುಂದಿನ ಆತ್ಮೋದ್ಧಾರದ ಸಾಧನೆಗಾಗಿ ಅನುಷ್ಠಾನವನ್ನು ತೀವ್ರಗೊಳಿಸಲು ಮತ್ತು ಮುಂದಿನ ಜನ್ಮ ಪಡೆಯಲು ಅಣಿಯಾಗಿದ್ದಾನೆ. ಅದಕ್ಕೆಂದೇ ಆತನ ಸಾವಿನ ಮುಂದೆ ಉತ್ತಮ ಸಾರ್ಥಕ ಬದುಕಿದೆ'' ''ಆ ಯೋಗಿ ಸಾಧಕನಾಗಿದ್ದು, ಸರ್ವಕಾಲದಲ್ಲೂ ಆತ್ಮೋದ್ಧಾರದ ಗುರಿ ಹೊಂದಿದ್ದಾನೆ. ಈ ದೃಷ್ಟಿಯಿಂದ ಬದುಕು ಮತ್ತು ಸಾವು ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಇದನ್ನೇ ಅವನಿಗೆ ನೆನಪಿಸಿದೆ''.

ಆ ಬೇಡರವನು ಹಿಂದಿನ ದುಷ್ಕೃತದ ಫಲವಾಗಿ ಕಾಡಿನಲ್ಲಿ ಮೃಗ ಪಕ್ಷಿಗಳನ್ನು ಕೊಂದು, ಅವನ್ನು ಬೇಯಿಸಿ ತಿನ್ನುತ್ತಾ ಯಾವ ಗೊತ್ತು ಗುರಿಯೂ ಇಲ್ಲದೆ ಜೀವನವನ್ನು ಸವೆಸುತ್ತಿದ್ದಾನೆ. ಇಲ್ಲಿಗೆ ಅವನ ಪ್ರಾರಬ್ಧಕರ್ಮದ ಒಂದು ಅಂಕ ಮುಗಿದು ಮುಂದೆ ಸನ್ಮಾರ್ಗದಲ್ಲಿ ಬದುಕಲು ಈತನ ಸಾವು ಮುಂದಿನ ಸಾರ್ಥಕ ಜೀವನಕ್ಕೆ ನಾಂದಿಯಾಗಲಿದೆ. ಈ ದೃಷ್ಟಿಯಿಂದ ಆತ ಸತ್ತು ಬದುಕಲಿ ಎಂದೆ''. ಶಿಷ್ಯ ಮಹಾಶಯ ಪೂಜ್ಯರಾದ ತನ್ನ ಗುರುಗಳ ತ್ರಿಕಾಲ ಜ್ಞಾನಾನುಭವದ ಬಗೆಗೆ ಆಶ್ಚರ್ಯವನ್ನೂ ಅವರ ನುಡಿಗಳ ವಿಶ್ಲೇಷಣೆ ಮತ್ತು ಅಂತರಾರ್ಥಗಳ ವಿವರಣೆಯಿಂದ ಸಂತೋಷವನ್ನು ತಂದುಕೊಂಡು ಸಾಷ್ಟಾಂಗ ನಮಸ್ಕರಿಸಿದ.

(ಸಂಗ್ರಹ)

# ಅಧ್ಯಕ್ಷ ನುಡಿ



ಕಳೆದ ತಿಂಗಳು ಗಣಪತಿ ಹಬ್ಬದ ಸಂಭ್ರಮ ಮನೆಗಳಲ್ಲಿ ಅಷ್ಟೇ ಅಲ್ಲದೆ ಅನೇಕ ಸಂಘ-ಸಂಸ್ಥೆಗಳಲ್ಲೂ ಕಾಣಿಸಿತ್ತು. ಈ ತಿಂಗಳ 3ನೇ ತಾರೀಖು ಬೆಂಗಳೂರು ಶಾಖೆಯು ಏರ್ಪಡಿಸಿದ್ದ ಗಣಪತಿ ಮಹಾಮಂಗಳಾರತಿ ಕಾರ್ಯಕ್ರಮ ಕಿಕ್ಕಿರಿದು ತುಂಬಿದ್ದ ಸಭಾಂಗಣದಲ್ಲಿ ಶ್ರೀ ಆರ್. ಕೆ. ಪ್ರಸನ್ನಕುಮಾರ್ ಮತ್ತು ಸಂಗಡಿಗರ ಅಮೋಘ ಸಂಗೀತ ಮತ್ತು ಶ್ರೀ ಬಿ. ಎಸ್. ರಾಮಮೂರ್ತಿ ನೇತೃತ್ವದ ಹಾಸ್ಯ ನಾಟಕಾಭಿನಯಗಳಿಂದ ಎಲ್ಲರ ಮನಗೆದ್ದಿತು. ಸದಸ್ಯರ ಬೆಂಬಲವಿದ್ದರೆ ಸಂಘಕ್ಕೆ ಯಾವುದೂ ಅಸಾಧ್ಯವಲ್ಲ ಎಂಬುದು ಇದರಿಂದ ವೇದ್ಯ.

ಸಂಘವು ನಡೆಸುತ್ತಿರುವ ಅನೇಕ ಯೋಜನೆಗಳು ಸದಸ್ಯಬಾಂಧವರಿಗಷ್ಟೇ ಅಲ್ಲದೆ ಅನೇಕ ಸನ್ಮಿತ್ರರಿಗೂ ಪ್ರಿಯವಾಗಿವೆ ಎಂಬುದಕ್ಕೆ ಡಾ|| ಮೀರಾ ಅವರ ನಿದರ್ಶನ ನಿಮ್ಮ ಮುಂದಿದೆ. ಅಮೆರಿಕಾ ನಿವಾಸಿಯಾಗಿರುವ ಡಾ|| ಮೀರಾ ವಿ. ನಾಥನ್ ಅವರು ಸಂಕೇತಿ ಜನಾಂಗಕ್ಕೆ ಸೇರಿದವರಲ್ಲ. ಆದರೂ ಸಂಘದ ಧ್ಯೇಯೋದ್ದೇಶಗಳು, ಕಾರ್ಯವೈಖರಿ ಹಾಗೂ ಚಟುವಟಿಕೆಗಳನ್ನು ಆಸಕ್ತಿಯಿಂದ ಗಮನಿಸಿ, ಮೆಚ್ಚಿ ಸಂಘದ ಅಶಕ್ತ ಮಾಸಾಶನ ನಿಧಿಗೆಂದು ರೂ. 10,000/- ಕೊಡುಗೆ ನೀಡಿದ್ದಾರೆ. ಡಾ|| ಮೀರಾ ಅವರ ಹೃದಯವೈಶಾಲ್ಯಕ್ಕೆ ನಮ್ಮ ನಮ್ರ ನಮನ ಹೇಳುತ್ತಾ ಅವರ ಈ ಶ್ರೇಷ್ಠ ಮೇಲ್ಪಂಕ್ತಿ ನಮಗೆಲ್ಲಾ ಸ್ಫೂರ್ತಿ ತರಲಿ ಎಂದು ಆಶಿಸುತ್ತೇನೆ.

ಕಳೆದ ಸಂಚಿಕೆಯಲ್ಲಿಯೇ ತಿಳಿಸಿರುವಂತೆ ಡಿಸೆಂಬರ್ ತಿಂಗಳಲ್ಲಿ ನಡೆಯಲಿರುವ ಬ್ರಾಹ್ಮಣ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ 'ಗಾಯತ್ರೀ ರಥಯಾತ್ರೆ'ಯು ಹೊರಟಿದ್ದು ಕರ್ನಾಟಕದ ಎಲ್ಲೆಡೆ ಸಂಚರಿಸಿ ಜನಸಂಪರ್ಕ ಮಾಡಲಿರುವ ಈ ಪವಿತ್ರ ಯಾತ್ರೆಯನ್ನು ಆಯಾ ಸ್ಥಳಗಳಲ್ಲಿ ವೈಭವದಿಂದ ಸ್ವಾಗತಿಸಬೇಕೆಂದು ನಮ್ಮ ಬಾಂಧವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಅಂತೆಯೇ ಸಮ್ಮೇಳನದಲ್ಲಿ ತನು-ಮನ-ಧನ ರೂಪಗಳಲ್ಲಿ ಎಲ್ಲಾ ಬಾಂಧವರೂ ಉತ್ಸಾಹದಿಂದ ಭಾಗವಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

**- ಎಂ ನರಸಿಂಹನ್**





# ಕಾರ್ಯದರ್ಶಿ ಕಾಲಂ



ಸಂಕೇತಿ ಸಮುದಾಯ ಪ್ರತಿಭೆಗಳ ಆಗರ. ಆದರೆ ಈ ಎಲ್ಲ ಪ್ರತಿಭಾನ್ವಿತರೂ ಎಲ್ಲರಿಗೂ ಪರಿಚಿತರಾಗಿರುವುದಿಲ್ಲ. 'ವಾರ್ತಾ'ದ ಮೂಲಕ ಅಂತಹ ಪ್ರತಿಭಾಮಣಿಗಳ ಪರಿಚಯ ಮಾಡಿಕೊಡುವುದು ನಮ್ಮ ಉದ್ದೇಶ. ಉದಾಹರಣೆಗೆ ಕೇಂದ್ರೀಯ ವಿದ್ಯಾಲಯಗಳಲ್ಲಿ ನಿಷ್ಠೆಯಿಂದ ಕಾರ್ಯನಿರ್ವಹಿಸುತ್ತಿರುವ ಹಲವಾರು ವ್ಯಕ್ತಿಗಳು ಸಂಕೇತಿಗಳಾಗಿದ್ದು ಅನೇಕ ಪ್ರಶಸ್ತಿಗಳಿಗೆ ಪಾತ್ರರಾಗಿರುತ್ತಾರೆ. ಅಂತಹ ವ್ಯಕ್ತಿಗಳು ಸಾಮಾನ್ಯವಾಗಿ ಸಂಕೋಚ ಸ್ವಭಾವದವರೂ ಆಗಿರುತ್ತಾರೆ. ಆದ್ದರಿಂದ ಅವರನ್ನು ಬಲ್ಲ ನಮ್ಮ ಬಾಂಧವರು ಸಮುದಾಯಕ್ಕಾಗಿ ಅವರ ವ್ಯಕ್ತಿತ್ವ ಹಾಗೂ ಪ್ರತಿಭೆಗಳ ಪರಿಚಯವನ್ನು 'ವಾರ್ತಾ' ಮೂಲಕ ಮಾಡಿಸುವಲ್ಲಿ ನೆರವಾಗಬೇಕೆಂದು ಕೇಳಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ರಾಮನಾಥಪುರದಲ್ಲಿ ಆಯೋಜನೆಗೊಂಡಿರುವ ಗಾನಕಲಾ ಪರಿಷತ್ತಿನ ಆಶ್ರಯದ ಸಂಗೀತ ಸಮ್ಮೇಳನ. ಗಾನಕಲಾ ಪರಿಷತ್ತಿನ ಅಧ್ಯಕ್ಷರು ನಮ್ಮೆಲ್ಲರ ಹೆಮ್ಮೆಯ ಕಲಾವಿದರಾದ ಶ್ರೀ ಆರ್. ಕೆ. ಪದ್ಮನಾಭ ಅವರು ಎಂದು ತಿಳಿಸಲು ಅತೀವ ಸಂತೋಷವೆನಿಸುತ್ತದೆ. ಶ್ರೀಯುತರಿಗೆ ಹಾರ್ದಿಕ ಅಬಿನಂದನೆಗಳು.

ಸಂಘದ ಸದಸ್ಯಮಿತ್ರರಲ್ಲಿ ಕೆಲವರು ಕೆಲವು ಭಿನ್ನಾಭಿಪ್ರಾಯಗಳಿಂದ ನ್ಯಾಯಾಲಯದವರೆಗೂ ಹೋಗಿದ್ದುದೂ, ಈಗ ಎಲ್ಲವೂ ಸೂಕ್ತವಾಗಿ ಬಗೆಹರಿಯಲ್ಪಟ್ಟಿವೆಯೆಂದೂ ಹೇಳಲಾಗಿತ್ತಷ್ಟೆ. ಮುಖ್ಯವಾಗಿ ಇದು ಅರ್ಜಿದಾರರು ಅರ್ಜಿಯನ್ನು ಹಿಂತೆಗೆದುಕೊಳ್ಳುವುದರ ಮೂಲಕ ಸಾಧ್ಯವಾಗಿದೆ ಎಂಬುದನ್ನು ಸ್ಪಷ್ಟಪಡಿಸಲು ಬಯಸುತ್ತೇನೆ.

'ವಾರ್ತಾ' ಪ್ರಕಟವಾದಾಗ ನಾವು ಎಷ್ಟೇ ಎಚ್ಚರವಹಿಸಿದ್ದರೂ ಕೆಲವು ಜಾಹಿರಾತುಗಳು ಬಿಟ್ಟುಹೋಗಿರುವುದು ವಿಷಾದದ ವಿಷಯ. ಮಾನ್ಯ ಬಾಂಧವರು ಈ ತಪ್ಪನ್ನು ದಯವಿಟ್ಟು ಮನ್ನಿಸಬೇಕೆಂದೂ ಮುಂದೆ ಇಂತಹ ತಪ್ಪುಗಳು ಆಗದಂತೆ ಎಚ್ಚರವಹಿಸುತ್ತೇವೆ ಎಂಬ ಆಶ್ವಾಸನೆ ನೀಡಲು ಇಚ್ಛಿಸುತ್ತೇನೆ.

ಸಂಘದ E-Mail ಬಳಸಿ ಹೆಚ್ಚಿನ ರೀತಿಯಲ್ಲಿ ಸಂಘ ಹಾಗೂ ವಾರ್ತಾದೊಡನೆ ಸಂಬಂಧವನ್ನು ಇರಿಸಿಕೊಳ್ಳಬೇಕೆಂದು ಎಲ್ಲರಲ್ಲೂ ವಿನಂತಿ.

**- ಆರ್. ಎಸ್. ಭಾಸ್ಕರ ಅವಧಾನಿ**

# ಶುಭ ಸಮಾಚಾರಗಳು

## ಗೃಹಪ್ರವೇಶ

| ತಾರೀಖು | ಹೆಸರು |
|---|---|
| 01.09.04 ಬೆಂಗಳೂರು | ಶ್ರೀಮತಿ ರಾಜೇಶ್ವರಿ ಮತ್ತು ಶ್ರೀ ಬಿ. ಎ. ಪ್ರಭಾಕರ್ |
| 01.09.04 ಬೆಂಗಳೂರು | ಶ್ರೀಮತಿ ಲೀಲಾವತಿ ಮತ್ತು ಶ್ರೀ ಬಿ. ಎಸ್. ಪ್ರಕಾಶ್ |
| 03.09.04 ಮೈಸೂರು | ಶ್ರೀಮತಿ ಸುಜಾತಾ ಮತ್ತು ಶ್ರೀ ಎಸ್. ನಟರಾಜ |

## ವಿವಾಹ ಮಹೋತ್ಸವ

| ತಾರೀಖು | ವಧು | ವರ |
|---|---|---|
| 10.09.04 ಮೈಸೂರು | ಚಿ|| ಸೌ|| ರಶ್ಮಿ ಎಸ್. (ಶ್ರೀಮತಿ ಅನ್ನಪೂರ್ಣ ಮತ್ತು ಶ್ರೀ ಬಿ. ಆರ್. ಶ್ರೀನಾಥ್ ಅವರ ಪುತ್ರಿ) | ಚಿ|| ರಾ|| ಲಕ್ಷ್ಮೀಕಾಂತ (ಶ್ರೀಮತಿ ಸರಸ್ವತಿ ಮತ್ತು ಶ್ರೀ ಎಂ. ಎಲ್. ಉಮಾಕಾಂತ ಅವರ ಪುತ್ರ) |

## ಸೆಪ್ಟೆಂಬರ್ ತಿಂಗಳಲ್ಲಿ ಸಂಘಕ್ಕೆ ಬಂದ ಕೊಡುಗೆಗಳು

| ಹೆಸರು | ಊರು | ರ. ನಂ. | ಆ.ಸ.ಸಂ. |
|---|---|---|---|

### ಸಭಾ ತಾಂಬೂಲಗಳು :

| ಹೆಸರು | ಊರು | ರ. ನಂ. | ಆ.ಸ.ಸಂ. |
|---|---|---|---|
| ಬಿ. ಎ. ಪ್ರಭಾಕರ್ | ಬೆಂಗಳೂರು | 7123 | 101.00 (ಗೃಹಪ್ರವೇಶ) |
| ಬಿ. ಎನ್. ರಮೇಶ್ | ಹಾಸನ | 7127 | 100.00 (ಗೃಹಪ್ರವೇಶ) |
| ವಿ. ನಟರಾಜ್ | ಬೆಂಗಳೂರು | 7132 | 100.00 (ಮಗನ ಮದುವೆ) |
| ಎಸ್. ನಟರಾಜ್ | ಮೈಸೂರು | 6941 | 101.00 (ಗೃಹಪ್ರವೇಶ) |
| ಬಿ. ಆರ್. ಶ್ರೀನಾಥ್ | ಮೈಸೂರು | 6954 | 250.00 (ಮಗಳ ಮದುವೆ) |





## ವಾರ್ತಾ / ಜಾಹೀರಾತು ಫಂಡ್ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಬಿ. ಸಿ. ಸತ್ಯನಾರಾಯಣ | ಮುಂಬಯಿ | 7129 | 1,200.00 |
| ಮೈಸೂರು ಕನ್ಸಲ್‌ಟೆಂಟ್ಸ್ | ಬೆಂಗಳೂರು | 7131 | 600.00 |

## ಹಾಸ್ಟೆಲ್ ಅನ್ನದಾನ ನಿಧಿ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಹೆಚ್.ಎಸ್. ವೆಂಕಟನರಸಿಂಹ ಮತ್ತು ಹೆಚ್.ಎಸ್. ಕೇಶವಮೂರ್ತಿ | ಬೆಂಗಳೂರು | 7124 | 400.00 (ತಂದೆಯ ನೆನಪು) |
| ಹೆಚ್.ಎಸ್. ಭಾಗೀರಥಮ್ಮ | ಮೈಸೂರು | 6945 | 5,000.00(ಹಿರಿಯರ ನೆನಪು) |
| ವಿಜಯ ಎಸ್. ಆರ್. | ಮೈಸೂರು | 6952 | 400.00 |

## ಸಾಲರೂಪ ವಿದ್ಯಾರ್ಥಿ ವೇತನದ ಮರುಪಾವತಿ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಸಾವಿತ್ರಿಮೂರ್ತಿ | ಬೆಂಗಳೂರು | 7107 | 5,000.00 |

## ಅಶಕ್ತ ಮಾಸಾಶನ ನಿಧಿ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಖಾಂಡ್ವಾ ನಿಧಿ | ಬೆಂಗಳೂರು | 7128 | 20,000.00 |
| ಮೀರಾ ವಿ. ನಾಥನ್ | ಯು.ಎಸ್.ಎ. | 6951 | 10,000.00 |

## ಸೆಪ್ಟೆಂಬರ್ ತಿಂಗಳಲ್ಲಿ ನಡೆದ ಹಾಸ್ಟೆಲ್ ಅನ್ನದಾನ ಸೇವಾ :

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 01.09.04 ಬೆಂಗಳೂರು | ಜ್ಯೋತಿ ಛಾರಿಟಬಲ್ ಟ್ರಸ್ಟ್ 6 ದಿನಗಳು | ಜ್ಯೋತಿ |
| 02.09.04 ಬೆಂಗಳೂರು | ಶ್ರೀನಿವಾಸಯ್ಯ ಮತ್ತು ಸಹೋದರರು | ತಾಯಿ ಪಾರ್ವತಮ್ಮ |

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 02.09.04 ಬೆಂಗಳೂರು | ರಾಮನಾಥನ್ ಹೆಚ್.ಎನ್. | ಅವರ ಹುಟ್ಟುಹಬ್ಬ |
| 02.09.04 ಬೆಂಗಳೂರು | ರಮೇಶ್ ಎಸ್. ಜಿ. | ತಾಯಿ ಜಯಲಕ್ಷ್ಮಮ್ಮ |
| 03.09.04 ಬೆಂಗಳೂರು | ಶಕುಂತಲಾ ವೆಂಕಟಕೃಷ್ಣಪ್ಪ | ಸಣ್ಣಮ್ಮ (ಪಿತಾಮಹಿ) |
| 03.09.04 ಬೆಂಗಳೂರು | ಅನಂತ ಸಾಯಿ ಸುಬ್ರಹ್ಮಣ್ಯ | ಅವರ ಹುಟ್ಟುಹಬ್ಬ |
| 05.09.04 ಬಾಂಬೆ | ಪ್ರೊ. ಆರ್.ಕೆ.ಶ್ಯಾಮಸುಂದರ್ | ತಂದೆ ಆರ್. ಕೆ. ಆನಂದ ರಾಮಯ್ಯ |
| 08.09.04 ಯು.ಎಸ್.ಎ. | ಶಿವಶಂಕರ್ ಮತ್ತು ವೈದೇಹಿ ಶಿವಶಂಕರ್ | ಮಗ ರಾಮ ಶಿವಶಂಕರ್ |
| 08.09.04 ಬಾಂಬೆ | ಕೃಷ್ಣಮೂರ್ತಿ ಆರ್.ವಿ. | ಸಹೋದರಿ ಪಾರ್ವತಿ |
| 12.09.04 ಬೆಂಗಳೂರು | ಸಾವಿತ್ರಿ ವಿಶ್ವನಾಥ್ | ತಂದೆ ಎಸ್ ಎ ಶಾಮಣ್ಣಯ್ಯ |
| 12.09.04 ಬೆಂಗಳೂರು | ರಾಮಸ್ವಾಮಿ ಬಿ. ಟಿ. | ಸಹೋದರಿ ಶಾಂತಮ್ಮ |
| 13.09.04 ಬೆಂಗಳೂರು | ಪ್ರಭಾಕರ್ ಹೆಚ್.ಎಸ್. | ತಾಯಿ ಹೆಚ್.ವಿ. ಸೀತಮ್ಮ |
| 15.09.04 ಪುಣೆ | ಕೃಷ್ಣಮೂರ್ತಿ ಆರ್. ಎಸ್. ಮತ್ತು ಸರೋಜಮ್ಮ ಎಂ.ಎಸ್. | |
| 17.09.04 ಬೆಂಗಳೂರು | ಸುಬ್ರಹ್ಮಣ್ಯಂ ಬಿ.ಎನ್.ವಿ. | ತಾಯಿ ಕಾವೇರಮ್ಮ |
| 17.09.04 ಬೆಂಗಳೂರು | ರಾಮಸ್ವಾಮಿ ಆರ್. ಸಿ. | ತಂದೆ ಚನ್ನಕೇಶವಯ್ಯ |
| 17.09.04 ಮೈಸೂರು | ಕಾವೇರಮ್ಮ | ಪತಿ ಕರ್ಪೂರವಲ್ಲಿ ನರಸಿಂಹ ಮೂರ್ತಿ |





| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 18.09.04 ಹೊಸಪೇಟೆ | ಶ್ರೀನಿವಾಸನ್ ಹೆಚ್.ಎಸ್. | ಅಜ್ಜ ಕೋಳೂರು ಸುಬ್ಬಣ್ಣ |
| 19.09.04 ಬೆಂಗಳೂರು | ಅರುಣ್ ಸಾಲಿಗ್ರಾಮ್, ಕಿರಣ್ ಸಾಲಿಗ್ರಾಮ್ | ತಾಯಿ ಗಾಯತ್ರಿ ಮೂರ್ತಿ |
| 20.09.04 ಬಾಂಬೆ | ಶ್ರೀಕಾಂತ ಹೆಚ್. ಎಸ್. | ತಾಯಿ ಪದ್ಮ ಶ್ರೀನಿವಾಸಯ್ಯ |
| 21.09.04 ಮೈಸೂರು | ವಿಜಯ ಎಸ್. ಆರ್. | ಕೆ. ಜಿ. ವೆಂಕಟರಾಮಯ್ಯ |
| 21.09.04 ಬೆಂಗಳೂರು | ಮಾಲತಿ ಎಸ್.ನಾರಾಯಣ್ ಶ್ರೀಹರಿ, ಶ್ರೀಕುಮಾರ್ | ತಾಯಿ ಸರೋಜ ಎನ್. ಸ್ವಾಮಿ |
| 22.09.04 ಬೆಂಗಳೂರು | ಶ್ರೀನಿವಾಸಯ್ಯ ಬಿ.ವಿ. ಮತ್ತು ಬಿ.ವಿ.ವಿ. ಸುಬ್ರಹ್ಮಣ್ಯ | ತಂದೆ ಬಿ. ಎಸ್. ವೆಂಕಟ ರಾಮಯ್ಯ |
| 22.09.04 ಮೈಸೂರು | ಕೇಶವಮೂರ್ತಿ ಹರವೆ | ತಂದೆ ಹರವೆ ಶಾನಭೋಗ ನರಸಿಂಹಯ್ಯ |
| 22.09.04 ಯು.ಎಸ್.ಎ. | ಗಣೇಶ್ ಪ್ರಸಾದ್ ಮತ್ತು ಸಹೋದರರು | ತಾಯಿ ಇಂದಿರ |
| 23.09.04 ಮೈಸೂರು | ಶಾಂತಮ್ಮ, ರತ್ನಮ್ಮ, ಗೌರಮ್ಮ | ತಂದೆ |
| 24.09.04 ಮೈಸೂರು | ರಾಜನ್ ಎಸ್. | ತಾಯಿ ಸಾವಿತ್ರಮ್ಮ |
| 25.09.04 ಮೈಸೂರು | ಭಾರತಿ ಶ್ರೀನಿವಾಸ್ | ತಂದೆ ಹೆಚ್.ಎನ್.ವೆಂಕಟ ರಾಮ್ ಮತ್ತು ಮಾವ ಲಕ್ಷ್ಮೀಕಾಂತಯ್ಯ ಆರ್.ಎಲ್ |
| 27.09.04 ಬೆಂಗಳೂರು | ಬಿ. ಎಸ್. ವೆಂಕಟರಾಮಯ್ಯ | ತಂದೆ ಬಿ.ಎಸ್. ಅನಂತ ರಾಮಯ್ಯನವರ ಹುಟ್ಟುಹಬ್ಬ |
| 29.09.04 ಬೆಂಗಳೂರು | ನರಸಿಂಹ ದತ್ತ, ಎನ್. | ಬಿ.ಎಸ್.ಗೋವಿಂದರಾಜು (ಮಾತಾಮಹ) |
| 30.09.04 ಬೆಂಗಳೂರು | ಲಲಿತಮ್ಮ ಕಾಲಭೈರವನ್ | ಅವರ ಹುಟ್ಟುಹಬ್ಬ |

## ಸಮಾಚಾರ ಸಂಗ್ರಹ

<u>ತಾಲಿಬಾನ್ : ಎಲ್ಲರಿಗೂ ತಲೆಬೇನೆ !</u> (07, ಸೆಪ್ಟೆಂಬರ್ 04; ಎ.ಪಿ. ಜೂಲಿಯಸ್ ರಾಯ್ಟರ್ಸ್) ಸೆಪ್ಟೆಂಬರ್ 11 : ಇಡೀ ಪ್ರಪಂಚದ ಜನರ ನಮ್ಮದಿ ಕೆಡಿಸಿದ ದಿನ. ಅಂದು ತಾಲಿಬಾನ್ ಭಯೋತ್ಪಾದಕರು ಅಮೆರಿಕದಲ್ಲಿ ಪೆಂಟಗನ್ ಕಟ್ಟಡಕ್ಕೆ ಬೆಂಕಿ ಹಾಕಿ 3000 ಜನರನ್ನು ಸುಟ್ಟು ಬೂದಿ ಮಾಡಿದರು. ಈಗ ಅವರು ಇನ್ನೊಂದು ದಿನಾಂಕವನ್ನು ಆಯ್ಕೆ ಮಾಡಿಕೊಂಡರು. ಅದು ಸೆಪ್ಟೆಂಬರ್ 1. ರಷ್ಯಾದ ಬೆಸ್ಲಾನ್ ಪಟ್ಟಣದಲ್ಲಿ ತಾಲಿಬಾಬನ್ ಗುಂಪು (ಅಲ್-ಖೈದಾ ಎನ್ನುವ ಹೆಸರಿನಲ್ಲಿ) 350 ಮಕ್ಕಳ ಪ್ರಾಣ ತೆಗೆಯಿತು. ರಜಾ ದಿನಗಳನ್ನು ಮುಗಿಸಿ ಸಂಭ್ರಮದಿಂದ ಶಾಲೆಗೆ ಬಂದು ನಲಿಯುತ್ತಿದ್ದ ಮಕ್ಕಳನ್ನು ಸ್ವಾಗತಿಸಲು ಟೀಚರ್ಸ್ ಬರಲಿಲ್ಲ, ಬದಲಾಗಿ ಮುಸುಕು ಹಾಕಿಕೊಂಡು ಬಂದ ರಾಕ್ಷಸರು! ಇವರೆಲ್ಲಾ ಯಾರು ಎಂದು ಗೊತ್ತಾಗುವ ಮೊದಲೇ ಅವರ ಪ್ರಾಣ ಹೋಗಿದ್ದವು. ಕಿವಿಗಳು ಕಿವುಡಾಗುವಂತೆ ಬಾಂಬುಗಳು ಸಿಡಿದವು. ಶಾಲೆಯ ಗೋಡೆಗಳು ಛಿದ್ರವಾದವು, ಗೋಡೆಗಳ ಒಳಗಿದ್ದ ಎಲ್ಲಕ್ಕೂ/ ಎಲ್ಲರಿಗೂ ಬೆಂಕಿ ಬಿತ್ತು. ತಂದೆ-ತಾಯಿಯರ-ಮಕ್ಕಳ ಸಂಕಟ ಮುಗಿಲುಗಳನ್ನು ಮುಟ್ಟಿದವು. ಅಂದು ಶಾಲೆಗೆ ಬರದಿದ್ದ ಮಕ್ಕಳ ಪ್ರಾಣಗಳನ್ನು ದೇವರೇ ಕಾಪಾಡಿದ್ದ! ಕೊಲ್ಲುವವರಿಗೆ ತರ್ಕವಿದೆ. ಅದನ್ನು ತಡೆಯುವವರಿಗೂ ತರ್ಕವಿದೆ. ಇವರಿಬ್ಬರ ಕೈಗಳಿಗೆ ಸಿಕ್ಕಿದ ಮುಗ್ಧರ ಸಾವಿಗೆ ಯಾವ ತರ್ಕವೂ ಇಲ್ಲ. ಆಧುನಿಕ ಉಗ್ರರ ತಂತ್ರವೇ ಹೀಗೆ! 100 ಸೈನಿಕರನ್ನು ಕೊಲ್ಲುವುದಕ್ಕಿಂತ 3 ಜನಸಾಮಾನ್ಯರನ್ನು ಕೊಂದರೆ ಎಂಥವರನ್ನಾದರೂ ತಲ್ಲಣಗೊಳಿಸುವುದು ಸುಲಭ. ಹಾಲು ಕುಡಿಯುವ ಮಕ್ಕಳನ್ನೂ ಇವರು ಬಿಡಲಾರರು. ಕಾಶ್ಮೀರ-ಇರಾಕ್-ಆಫ್‌ಘಾನಿಸ್ತಾನ್-ಪಾಕೀಸ್ತಾನ್-ಚೆಚೆನ್ಯಾ-ಪ್ಯಾಲಿಸ್ಟೈನ್.... ಹೀಗೆ ಭಯೋತ್ಪಾದನೆ ದೇಶ-ಭಾಷೆಗಳ ಗಡಿ ದಾಟಿ ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ನೀಚ ಕೃತ್ಯಗಳಿಗೆ ಪರೋಕ್ಷವಾಗಿ ಬೆಂಬಲಿಸಿದ ದೇಶಗಳು ಈಗ ಸಂಕಟವನ್ನು ಅನುಭವಿಸುತ್ತಿವೆ. ಉಪ್ಪು ತಿಂದಮೇಲೆ ನೀರು ಕುಡಿಯುತ್ತಿವೆ. ಮುಂದುವರೆದ ರಾಷ್ಟ್ರಗಳೆಂದು ಬೀಗುತ್ತಿರುವ ಈ ದೇಶಗಳಿಗೆ ತಮ್ಮ ನಾಡಿನ ಮಕ್ಕಳಿಗೂ ರಕ್ಷಣೆ ನೀಡಲಾರದ ಅಸಹಾಯಕ ಮಟ್ಟಕ್ಕೆ ಇಳಿದುಬಿಟ್ಟಿವೆ. ತಂದೆ-ತಾಯಿಯರಿಗೆ ಗೋಳಾಡುವುದನ್ನು - ಶಾಪ ಹಾಕಿರುವುದನ್ನು ಮಾತ್ರ ಉಳಿಸಿವೆ. ಪುಟ್ಟ ಮಕ್ಕಳನ್ನು ಭಯೋತ್ಪಾದಕರ ಧಾಳಿಯಿಂದಾಗಿ ಕಳೆದುಕೊಂಡವರಷ್ಟೇ ಅಲ್ಲದೆ ಸಾವಿರಾರು ಜನ ದಿಗ್ಭ್ರಮೆಯಾದಂತೆ ಕುಳಿತುಬಿಟ್ಟಿದ್ದಾರೆ. ಆಗಸ್ಟ್ ತಿಂಗಳು ಶಾಲೆಗೆ ರಜಾ ಇದ್ದುದರಿಂದ ಶಾಲಾ ಆಡಳಿತ ಮಂಡಳಿ ರಿಪೇರಿ ಕೆಲಸಗಳನ್ನು ಪೂರ್ಣಗೊಳಿಸಲು ತೀರ್ಮಾನಿಸಿತು. ಆಗ ಕೆಲಸಗಾರರಾಗಿ ಬಂದ ಉಗ್ರರು ಯಥೇಚ್ಛವಾಗಿ ಬಾಂಬುಗಳನ್ನು ಅವಿತಿಟ್ಟರು.





ಮುಂದಿನ ತಿಂಗಳು (ಅಂದರೆ ಈಗ) ಬಂದು ರಿಮೋಟ್‌ನಿಂದ ಸಿಡಿಸಿ ಆಹುತಿಕೊಟ್ಟರು. ಮೈ-ಕೈ ಗಾಯಮಾಡಿಕೊಂಡು ದಿಕ್ಕಾಪಾಲಾಗಿ ಮಕ್ಕಳು ಓಡಿದರು. ಚೆಚೆನ್ಯಾಗೆ ಸ್ವಾತಂತ್ರ್ಯ ಬೇಕು ಎಂದು ಹೋರಾಟ ಮಾಡುವ ಉಗ್ರರಿಗೆ ಇನ್ನು ಮುಂದೆ ಜನಸಾಮಾನ್ಯರ ಬೆಂಬಲವಿಲ್ಲ. ಕಳೆದ 3 ತಿಂಗಳಿನಲ್ಲಿ ಇರಾಕ್‌ನಲ್ಲಿ 50ಕ್ಕೂ ಹೆಚ್ಚು ವಿದೇಶೀಯರನ್ನು ಕೊಲ್ಲಲಾಗಿದೆ. 12 ಜನ ನೇಪಾಳೀಯರ ಕತ್ತು ಕುಯ್ಯಲಾಗಿದೆ. ಅಷ್ಟೇ ಅಲ್ಲದೆ ಅಮೆರಿಕಾ-ಇಟಲಿ-ಜೋರ್ಡಾನ್-ದಕ್ಷಿಣ ಕೊರಿಯಾ-ಪಾಕೀಸ್ತಾನ್-ಜರ್ಮನಿ ಸೋಮಾಲಿಯಾದಲ್ಲಿ ಜನಸಾಮಾನ್ಯರು, ಪತ್ರಕರ್ತರು ಜೆಹಾದ್ (ಧರ್ಮಯುದ್ಧ) ಮಾಡುವವರ ಕೈಲಿ ಪ್ರಾಣ ತೆಗೆಸಿಕೊಂಡಿದ್ದಾರೆ. 1992-2001ರಲ್ಲಿ ಆಲ್ಜೀರಿಯಾದಲ್ಲಿ ಹೆಂಗಸರು-ಮಕ್ಕಳೆನ್ನದೆ ಸಾವಿರಾರು ಜನರ ತಲೆ ಕತ್ತರಿಸಿದ್ದರು. ಆದರೆ ಈಗ ಮಾಡುವಂತೆ ಆಗ ವೈದ್ಯರು-ತಂತ್ರಜ್ಞರು-ರೆಡ್‌ಕ್ರಾಸ್ ಸಿಬ್ಬಂದಿಗಳೂ ಸಹ ಕೊಲೆಯಾಗುತ್ತಿರಲಿಲ್ಲ. 27 ಜೂನ್ 76ರಂದು ಫ್ರಾನ್ಸ್‌ನ ವಿಮಾನವನ್ನು ಹಮಾಸ್ ಉಗ್ರರು ಉಗಾಂಡಾಕ್ಕೆ ಅಪಹರಿಸಿದರು. ಅದರಲ್ಲಿದ್ದ 105 ಯಹೂದಿಗಳನ್ನು ಸೆರೆಯಲ್ಲಿರಿಸಿಕೊಂಡರು. 48 ಗಂಟೆಗಳಲ್ಲಿ ಇಸ್ರೇಲ್ ಬಂಧಿಸಿರುವ 53 ಹಮಾನಸ್ ಉಗ್ರರನ್ನು ಬಿಡುಗಡೆ ಮಾಡಬೇಕೆಂಬುದು ಅವರ ಬೇಡಿಕೆ. ನರಭಕ್ಷಕ ಸರ್ವಾಧಿಕಾರಿ ಇದಿ ಅಮೀನ ಉಗ್ರರ ಪರವಾಗಿದ್ದ. ಉಗ್ರರು ಏನನ್ನೇ ಮಾಡಿದರೂ ಅವರಿಗೆ ತಲೆಬಾಗದಿರುವ ಹಟ ಇಸ್ರೇಲ್‌ದು. ಹಮಾಸ್ ಉಗ್ರರ ವೇಷ ಹಾಕಿಕೊಂಡ ಸೈನಿಕರು ಉಗಾಂಡಕ್ಕೆ ಹೊರಟರು. ಸ್ವಲ್ಪವೂ ಸುಳಿವು ನೀಡದೆ ಉಗಾಂಡಾದ ಎಂಟೆಬ್ಬೆ ವಿಮಾನ ನಿಲ್ದಾಣದಲ್ಲಿಳಿಯಿತು. ಇದಿ ಅಮೀನವ ಕಾರಿನಂತೆಯೇ ಇದ್ದ ಕಪ್ಪು ಮರ್ಸಿಡಿಸ್ ಕಾರು ವಿಮಾನದ ಬಳಿ ಹೋಯಿತು. ಒಳಗಿದ್ದ ಉಗ್ರರು ತಮ್ಮ ಕಡೆಯವರೇ ಬಂದಿದ್ದಾರೆಂದು ವಿಮಾನದ ಬಾಗಿಲು ತೆರೆದರು. ನಂತರ ನಡೆದ ಕಾರ್ಯಾಚರಣೆಯಲ್ಲಿ ಉಗ್ರರು ಹತರಾದರು. 2 ವರ್ಷಗಳ ಹಿಂದೆ ನಾಟಕ ಮಂದಿರದಲ್ಲಿ ಉಗ್ರರು ಪ್ರೇಕ್ಷಕರನ್ನು ರಷ್ಯಾದಲ್ಲಿ ಹಿಡಿದುಕೊಂಡಿದ್ದಾಗ ಪುಟಿನ್ ಸರ್ಕಾರ ರಂಗಮಂದಿರಕ್ಕೆ ಹೈಡ್ರೋಜನ್ ಸಲ್ಫೈಡ್ ಗ್ಯಾಸನ್ನು ನುಗ್ಗಿಸಿ ಉಗ್ರರನ್ನು ಹತ್ಯೆ ಮಾಡಿತ್ತು. ಆಗ 130 ಜನಸಾಮಾನ್ಯರು ಸತ್ತರೂ ಸಹ ಪುಟಿನ್ ಮತ್ತೆ ಅಧಿಕಾರಕ್ಕೆ ಬಂದರು! ವಿಮಾನ ಅಪಹರಣ ನಾಗರೀಕರನ್ನು ಬಂಧಿಸುವುದು .... ಯಾವುದೇ ಸರ್ಕಾರಕ್ಕೂ ಒಂದು ಸವಾಲು. ಮಿಲಿಟರಿ ಶಕ್ತಿಯಲ್ಲಾಗಲೀ, ಹಣಕಾಸಿನ ಶಕ್ತಿಯಲ್ಲಾಗಲೀ ಎಷ್ಟೇ ಬಲವಾಗಿದ್ದರೂ ಅದು ಏನೂ ಮಾಡಲಾರದ ಪರಿಸ್ಥಿತಿಯನ್ನು ಸೃಷ್ಟಿಸುತ್ತದೆ. ಆಧುನಿಕ ಸಮರ ಕಲೆಯಲ್ಲಿ ಇಂತಹ ಬಿಕ್ಕಟ್ಟಿನ ಪರಿಸ್ಥಿತಿಯನ್ನು ನಿಭಾಯಿಸಲು ಇಸ್ರೇಲ್ ವಿಶೇಷವಾಗಿ ಸೈನಿಕರಿಗೆ ಶಿಕ್ಷಣ ಕೊಡುತ್ತದೆ.

<u>- ಬಿ. ಎಸ್. ಸತೀಶ್</u>

## POINT TO PONDER

During my medical college days we had a very learned professor of medicine who used to bring an important point by narrating a small anecdote. I remember vividly one such story. He narrated the following story. A stupid fisherman approached a learned scholar to learn the art of logic. The learned scholar said, "Do you like fish ?" The fisherman replied, "Sir, I love fish !" The scholar said, "Fish love water is it not ?" The fisherman nodded in affirmative. The scholar continued, "All people love water is it not ?" The fisherman smiled and said, "Definitely, Sir !" The scholar smiled indulgently and said, "So the deduction is you love fish, the fish love water, everybody loves water and so everybody loves you and you love everybody ! So you are heterosexual !" The fisherman thought in his stupid way that he had learnt all about the subject and returned to his town. He wanted to show off his knowledge of logic. But for his bad luck, he met a brahmin. So he asked him whether he liked fish. The brahmin was horrified and said, "No, I am a pure vegetarian !" The fisherman deduced, "Sorry for you, Sir, you don't like fish, so you don't like the water which the fish love and you also don't love all people who love water. So you ara a homosexual !" Well, the stupid fisherman





walked away feeling that he had achieved a great feat. Everyone who heard his logic laughed at his ignorance. Our professor concluded that we must use logic in differential diagnosis in the most intelligent manner and not in a stupid manner like the fisherman. Well, even today his statement holds good. Logic if applied in a correct and intelligent manner not only in medicine but in every day life will help us.

Let us ponder on this point.

**- Dr. S. Mohan Ram**

***********

## ಪ್ರತಿಭೆ

**ಕು|| ಅನಪಮ ಜಗದೀಶ್**

**ಬಿ.ಎಸ್‌ಸಿ. (ಬಯೋಟೆಕ್ನಾಲಜಿ)ಯಲ್ಲಿ ಶೇ. 81.4. ಬೆಂಗಳೂರು ವಿಶ್ವವಿದ್ಯಾಲಯಕ್ಕೆ 7ನೇ ರ್‍ಯಾಂಕ್ ಗಳಿಸಿದ್ದಾರೆ.**

ತಂದೆ : **ಹೆಚ್. ಎನ್. ಜಗದೀಶ್**

ತಾಯಿ : **ಆರ್. ಜಿ. ಗೀತಾದೇವಿ**

ದಿ|| ಹರವೆ ನಾರಾಯಣ ಮತ್ತು ಶ್ರೀಮತಿ ಸಾವಿತ್ರಮ್ಮ ಹಾಗೂ ಆರ್. ಎನ್. ಗೋಪಾಲಕೃಷ್ಣಯ್ಯ ಮತ್ತು ದಿ|| ಲೋಪಾಮುದ್ರ ಅವರ ಮೊಮ್ಮಗಳು.

ಕು|| ಅನುಪಮ ಜಗದೀಶ್‌ರನ್ನು ಸಂಘವು ಅಭಿನಂದಿಸುತ್ತದೆ.

# SATYAM VADA

(Contd. from last month)

Lies told as a witness in a court of law, on oath, is wrong. If it is told to save a guilty person, particularly if it results in implicating an innocent person. Telling lies in a corruption case or sex scandal is very common. Equally bad is telling a lie to cause harm to an innocent person out of hatred or causing a man to lose his property or assets. Telling lies to hide one's misconduct is also bad. Resorting to lies to gain small financial advantage, circumversting an inconvenient rule, to avoid being found fault with etc are perhaps; even less severe. Are lies told without a deliberate intent pardonable ? What about white lies ? What about lies told to protect or preserve a secret, entrusted to you by some one, which you have to keep out of loyalty to him ?

It is not uncommon for people to resort to concealing facts and telling lies to gain some temporary financial advantage, to exploit a loop hole in a rule, or to circumvent an inconvenient rule etc. Consider while passing through a: "green channel" to avoid paying customs duty in an international airport or, consider temptation of a person to conceal facts while filing income tax return. Have we not heard of people making false leave travel concession claims, wrong medical reimbursement claims, and even obtaining false medical certificates for even taking leave of absence ? General justification being given in such cases is "Every one does these things" Is it therefore justified? No doubt, some financial or other gain may he bad. But what damage the psyche suffers is unkonwn. The advantage is seen and





experienced immediately. But the effect it may have is not seen - "It is adrishya" - The future alone will tell.

There are other times when out of politeness or not appearing to be rude, we say what is not factually correct. Consider one is invited for a meal by a friend. After the meal, while taking leave and thanking the hostess, it is not unusual to say how much one enjoyed the meal and how much trouble the lady had taken - Both factual. The lady, however, out of politeness, would perhaps, say in reply "Oh, no, not at all - what a pleasure it was to have you with us" etc - May be she had taken much trouble but can she be factual and rude in reply ? Can her reply be considered a lie - harmless though it is. Similarly, in a big function like a marriage, out of politeness, one would say how nice the meal was, though not really so. It is not different while expressing an opinion about a new piece of jewelry or a new saree which one may not really lie - These are of course, harmless lies.

Many times we find that lies are told to escape being found fault with. A worker in an office, or a maid servant if asked why he / she is late, may not give the true reason - They usually say, cycle puncture, bus missed or mother or child sick etc. What if the mother or child becomes really sick, as a direct consequence of the falsehood ? After such an experience, will they not be careful before telling a lie again, to escape punishment for the lie ? Will they not learn a lesson ?

Many times, out of inadvertence or forgetfulness or lack of alertness, we may unwillingly tell lies. For example. If we see a person coming late to a gathering or a function once, twice or even a few times, we are likely to exclaim, in

irritation, "He never comes in time. He always comes late". Use of "never, always" may be contrary to facts. He may be in time may times which we may not have seen. Use of such words as "the best, or the worst, most beautiful, least popular" etc may not be truthful but it is due to lack of alertness or use of inappropriate word and not a deliberate intention of telling a lie.

Have we not come across instances when people may not tell the correct ages of children while buying railway tickets or cinema tickets ? In refreshing contrast, I read about a certain incident in U.S.A. in book. An elderly gentleman had taken two grand children to a mini golf course. The children were aged 5, 7 and children below 6 were admitted free. The elderly gentleman asked for two tickets and the ticket issuing person suggested that if he declared the child was less than 6 years, he could have saved one ticket. To this, the elderly gentleman said "But the child knows he is seven". He could have saved one ticket - a temporary small financial gain - But at what cost to the child and his values?

( To be Continued.... )

Lt.Col.B.V.S. Rao (Retd.)
Tel : 25282899

## *Change of Address*

**R. L. Srinivas**

**Janaki**

No. 136, 2nd Floor, 2nd Main, 4th Block,
Kathriguppa 3rd Phase, BSK 3rd Stage,
Bangalore - 560 085.
**Ph : 26695997**





## ವಾರ್ತಾ ನಿಧಿ

ಸಂಘದ ಸದಸ್ಯರ ನಡುವೆ ಮುಖ್ಯಸಂಪರ್ಕ ಸೇತುವೆಯಾಗಿರುವ ಸಂಘದ ಚಟುವಟಿಕೆಗಳ ಮುಖವಾಣಿಯಾಗಿರುವ ಬಾಂಧವರ ಪ್ರತಿಭೆಗಳಿಗೆ ಒಂದು ಕನ್ನಡಿಯಂತಿರುವ ನಿಮ್ಮ 'ಸಂಕೇತಿ ವಾರ್ತಾ'ವನ್ನು ಸದೃಢಗೊಳಿಸಿ, ಗಟ್ಟಿಯಾಗಿ ತನ್ನ ಕಾಲಮೇಲೆ ನಿಲ್ಲುವಂತೆ ಮಾಡುವ ಹೊಣೆ ನಮ್ಮ-ನಿಮ್ಮೆಲ್ಲರ ಮೇಲಿದೆ. ಈ ನಿಟ್ಟಿನಲ್ಲಿ ಬಾಂಧವರಿಂದ ಉದಾರ ಕೊಡುಗೆಗಳನ್ನು ನಿರೀಕ್ಷಿಸಲಾಗಿದೆ. ಮಾನ್ಯ ಬಾಂಧವರು ತಮ್ಮ ಉದಾರ ಮನಸ್ಸಿನ ಕೊಡುಗೆಗಳನ್ನು ಅಧಿಕ ಸಂಖ್ಯೆಯಲ್ಲಿ ನೀಡಿ ಈ ಔಚಿತ್ಯಪೂರ್ಣ ಕಾರ್ಯದಲ್ಲಿ ಭಾಗಿಗಳಾಗಬೇಕೆಂದು ಕೋರುತ್ತೇವೆ. ಎರಡು ಪ್ರಕಾರದ ದಾನಿಗಳನ್ನು ಗುರುತಿಸಲಾಗುವುದು.

**ರೂ. 5,000/- ಕೊಡುಗೆ ನೀಡುವವರು**
**ಮಹಾಪೋಷಕರು**

**ರೂ. 1,000/- ಕೊಡುಗೆ ನೀಡುವವರು**
**ಪೋಷಕರು**

ದಾನಿಗಳ ಹೆಸರುಗಳನ್ನು ಪ್ರತಿ ತಿಂಗಳೂ 'ವಾರ್ತಾ'ದಲ್ಲಿ ಪ್ರಕಟಿಸಲಾಗುವುದು.

## ಶ್ರೀಮತಿ ಕೌಸಲ್ಯಾ ವೈದ್ಯನಾಥನ್



ವಿದ್ಯೆ, ಕಲೆ ಕಲಿಯುವಿಕೆಗೆ ವಯಸ್ಸು ಪ್ರಧಾನವಲ್ಲ. ಸಮಯ, ಮನಸ್ಸು, ಕಾಳಜಿ, ಕಲಿಯುವ ಛಲವಿದ್ದರೆ ಏನನ್ನು ಬೇಕಾದರೂ ಇಳಿವಯಸ್ಸಿನಲ್ಲೂ ಕಲಿಯಬಹುದೆಂಬುದನ್ನು ಶ್ರೀಮತಿ ಕೌಸಲ್ಯಾರವರು ತೋರಿಸಿಕೊಟ್ಟಿದ್ದಾರೆ.

ಹನಸೋಗೆ ಕೇಶವಯ್ಯ ಮತ್ತು ಸೀತಮ್ಮನವರ ಮಗಳಾಗಿ 1937ರಲ್ಲಿ ಜನನ. ಹಿಂದಿನ ಎಲ್.ಎಸ್.ವರೆವಿಗೆ ವಿದ್ಯಾಭ್ಯಾಸವಾಗಿ ಶ್ರೀ ಆರ್. ವೈದ್ಯನಾಥನ್‌ರವರನ್ನು ವಿವಾಹವಾಗಿ ಮೂರು ಮಕ್ಕಳನ್ನು ಪಡೆದು, ಮಕ್ಕಳಿಗೆಲ್ಲಾ ಮದುವೆ ಮಾಡಿ ಜವಾಬ್ದಾರಿಗಳನ್ನು ಮುಗಿಸಿ ಪತಿ ಶ್ರೀ ಆರ್. ವೈದ್ಯನಾಥನವರ ಜೊತೆ ನಿವೃತ್ತಿ ಜೀವನದಲ್ಲಿರುತ್ತಾರೆ. ಶ್ರೀ ವೈದ್ಯನಾಥರವರು ಹೆಚ್.ಎ.ಎಲ್.ನಲ್ಲಿ ಇಂಜಿನೀಯರ್ ಆಗಿದ್ದರು.

ಶ್ರೀಮತಿ ಕೌಸಲ್ಯರವರು ತಮ್ಮ 67ನೇ ಇಳೀ ವಯಸ್ಸಿನಲ್ಲಿ ಕರ್ನಾಟಕ ಗಮಕ ಕಲಾ ಪರಿಷತ್ ನಡೆಸುವ ''ಕಾಜಾಣ'' ಮತ್ತು ''ಪಾರೀಣ'' ಪರೀಕ್ಷೆಗಳಲ್ಲಿ ತೇರ್ಗಡೆಯಾಗಿರುತ್ತಾರೆಂದು ತಿಳಿಸಲು ಸಂತೋಷವಾಗುತ್ತದೆ. ನಮ್ಮ ಯುವ ಪೀಳಿಗೆಗೆ ಶ್ರೀಮತಿಯವರ ಶ್ರದ್ಧೆ ಒಂದು ಮಾರ್ಗದರ್ಶಿ. ಶ್ರೀಮತಿ ಕೌಸಲ್ಯರವರು ದಿ|| ಹೆಚ್. ರಾಮಸ್ವಾಮಯ್ಯ ಮತ್ತು ದಿ|| ಲಕ್ಷ್ಮೀದೇವಮ್ಮನವರ ಸೊಸೆ.

**- ರು. ಸೂ. ಭಾಸ್ಕರ ಅವಧಾನಿ**

## ಶ್ರದ್ಧಾಂಜಲಿ

04.10.04 **ಶ್ರೀ ಹೆಚ್. ಕೆ. ಸುಂದರರಾವ್, 75 ವರ್ಷ,**

ಬೆಂಗಳೂರು ಸಂಕೃತಿ ಗೋತ್ರ

ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ ಅವರ ಕುಟುಂಬ ವರ್ಗದವರಿಗೆ ಈ ದುಃಖವನ್ನು ಭರಿಸಲು ಧೈರ್ಯ, ಸ್ಥೈರ್ಯಗಳನ್ನು ಭಗವಂತನು ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ.





## Smt. Malathi Ramnath
TGT (Science)

**Kendriya Vidyalaya No. 2, Colaba, Mumbai**
(Mumbai Region)



Smt. Malathi Ramnath is an excellent Science teacher and has 27 years of outstanding service to her credit. She is very industrious and works with a missionery zeal. She has innovated many practices to inculcate scientific aptitude among the students. She has set up the Junior Science Lab. She has always produced 100% result in the board exams and many of ther students secured merit certificates at national level. She is an asset to the institution and the community as a whole. She helps students to prepare their projects.

She has been conferred the 'Incentive Award' from Kendriya Vidyalaya Sanghatan, New Delhi for Mumbai Region for the year 2003 - 2004.

**B. M. Venkataramaiah** (Father)
(Basavapatna Mariyappa)
**Ahalya** (Mother)

**K. Ramnath** (Husband)
Deputy General Manager
Hindustan Petroleum Corporation
Chief of R & D
Mumbai

## ಬೆಂಗಳೂರು ಶಾಖೆಯ ಸರ್ವಸದಸ್ಯರ ಸಾಮಾನ್ಯ ಸಭೆ ಮತ್ತು ಮುಂದಿನ ಕಾರ್ಯಕಾರಿ ಸಮಿತಿಯ ಚುನಾವಣೆ

ಬೆಂಗಳೂರು ಶಾಖೆಯ ಸರ್ವಸದಸ್ಯರ ಸಾಮಾನ್ಯ ಸಭೆಯನ್ನು ದಿನಾಂಕ 05.12.04ರಂದು ನಡೆಸಲು ಸಮಿತಿ ತೀರ್ಮಾನಿಸಿದೆ. ಬೆಂಗಳೂರಿನ ಎಲ್ಲಾ ಸಂಕೇತಿಗಳೂ ಭಾಗವಹಿಸಿ, ಮುಂದಿನ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಬೇಕಾಗಿ ಪ್ರಾರ್ಥಿಸುತ್ತೇವೆ.

ಸಮಯ : **ಬೆಳಿಗ್ಗೆ 11 ಗಂಟೆ**

ಸ್ಥಳ : **ಮಾಸ್ತಿ ರಂಗಮಂದಿರ, ಶಂಕರಮಠ ರಸ್ತೆ, ಶಂಕರಪುರಂ, ಬೆಂಗಳೂರು - 560 004.**

ನೂತನ ಕಾರ್ಯಕಾರಿ ಸಮಿತಿ ಚುನಾವಣೆನಂತರಭೋಜನದ ಏರ್ಪಾಡು ಮಾಡಲಾಗಿದೆ.

## ಬೆಂಗಳೂರು ಶಾಖೆಯ ಪುರಂದರ ತ್ಯಾಗರಾಜ ಆರಾಧನಾ ಮಹೋತ್ಸವ

ಪ್ರಿಯ ಸಂಕೇತಿ ಬಂಧುಗಳೇ ಭಕ್ತಿಪೂರ್ವಕವಾಗಿ ನಡೆದ ತ್ಯಾಗರಾಜ ಆರಾಧನೆ ನಮ್ಮೆಲ್ಲರ ಮನಸ್ಸಿನಲ್ಲಿ ಇನ್ನೂ ಹಸಿರಾಗಿರುವಂತೆಯೇ ಮುಂದಿನ ತ್ಯಾಗರಾಜ ಆರಾಧನಾ ಮಹೋತ್ಸವದ ದಿನ ಓಡೋಡಿ ಬಂದಿದೆ. ಕಳೆದ ವರ್ಷದಂತೆಯೇ ಈ ವರ್ಷವೂ ಜಯನಗರದ ಶ್ರೀ ಜಯರಾಮ ಸೇವಾ ಮಂಡಲಿಯಲ್ಲಿ ಶ್ರೀ ಪುರಂಧರ ತ್ಯಾಗರಾಜ ಆರಾಧನೆಯನ್ನು ದಿನಾಂಕ 30.01.05ರಂದು ನಡೆಸಲು ತೀರ್ಮಾನಿಸಲಾಗಿದೆ. ಕಳೆದ ವರ್ಷದಂತೆಯೇ ಈ ವರ್ಷವೂ ಎಲ್ಲರೂ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಬೇಕೆಂದು ಪ್ರಾರ್ಥಿಸುತ್ತೇವೆ.

ಕಾರ್ಯಕಾರಿ ಸಮಿತಿ ಪರವಾಗಿ
**ಎಸ್. ಸಿ. ಮಂಜುನಾಥ**
ಅಧ್ಯಕ್ಷರು
ಬೆಂಗಳೂರು ಶಾಖೆ





## ಕಾಶೀಯಾತ್ರೆ - ಮತ್ತೂರು ಕೃಷ್ಣಮೂರ್ತಿಗಳೊಂದಿಗೆ

...... ಕಳೆದ ಸಂಚಿಕೆಯಿಂದ

ಹಿಂದೂಗಳಲ್ಲಿ ಮೂರು ಪವಿತ್ರ ಯಾತ್ರಾ ಸ್ಥಳಗಳು. ಕಾಶೀ, ಪ್ರಯಾಗ, ಗಯಾ ಈ ಮೂರು ಕ್ಷೇತ್ರಗಳನ್ನು ಒಟ್ಟು 'ತ್ರಿಸ್ಥಲಿ' ಎನ್ನುತ್ತಾರೆ. ಇದರ ಕುರುಹಾಗಿ ಶ್ರಾದ್ಧ ಮಾಡಿದ ಕರ್ತೃ, ಕಾಮ ಕ್ರೋಧಾದಿಗಳನ್ನು ಬಿಡಬೇಕೆಂದು ಪುರೋಹಿತರು ಆದೇಶಿಸುತ್ತಾರೆ. ಇದರ ಪ್ರತ್ಯಾಮ್ನಾಯವಾಗಿ ಒಂದು ತರಕಾರಿ, ಒಂದು ಹಣ್ಣು, ಒಂದು ಸಿಹಿ ಅಲ್ಲದೆ ಆಲದೆಲೆಯ ಭೋಜನ ಮಾಡುವುದನ್ನು ವರ್ಜಿಸಬೇಕೆಂದು ತಿಳಿಸಿದರು. ಆ ಪ್ರಕಾರ ಸಿಹಿ ಕುಂಬಳ, ಸೇಬು ಹಾಗೂ ಜಿಲೇಬಿಯನ್ನು ನಾವು ದಂಪತಿಗಳು ಅಕ್ಷಯ ವಟವೃಕ್ಷದ ಕೆಳಗೆ ಬಿಡುವುದಾಗಿ ಘೋಷಿಸಿ ಮನೆಗೆ ವಾಪಸ್ಸು ಬಂದೆವು. ಪ್ರಯಾಗವು ಮುಂಡನ ಕ್ಷೇತ್ರ ಕಾಶೀಯು ದಂಡನ ಕ್ಷೇತ್ರ ಹಾಗೂ ಗಯಾ ಪಿಂಡನ ಕ್ಷೇತ್ರವೆಂದೂ ಪ್ರಸಿದ್ಧಿಯಾಗಿದೆ. ಮಕ್ಕಳಾಗದವರು ಪ್ರಾರ್ಥನೆ ಮಾಡಿಕೊಂಡು ಹೂವು ಅಕ್ಷತೆಯನ್ನು ಅರಿಸಿನ ಬಟ್ಟೆಯಲ್ಲಿ ಕಟ್ಟಿ, ಈ ವಟವೃಕ್ಷದ ರೆಂಬೆಗೆ ಕಟ್ಟಿದರೆ, ಭಗವಂತ ಅನುಗ್ರಹಿಸುತ್ತಾನೆಂಬ ಪ್ರತೀತಿ. ಈ ವೃಕ್ಷದ ಪ್ರತಿ ಎಲೆ ಎಲೆಗೂ ಬಟ್ಟೆಯ ಚಿಕ್ಕ ಚಿಕ್ಕ ಗಂಟುಗಳು ನೇತಾಡುವುದನ್ನು ನಾವು ನೋಡಬಹುದು.

ತಂದೆ ತಾಯಿಗಳು ಬದುಕಿರುವವರೆಗೆ ಅವರ ಮಾತನ್ನು ತಪ್ಪದೇ ನಡೆಸುತ್ತಾ ಇರಬೇಕು. ಅವರು ಗತಿಸಿದ ನಂತರ ಪ್ರತಿ ವರ್ಷವೂ ಮೃತಾಹದಂದು ಬ್ರಾಹ್ಮಣ ಭೋಜನ ಮಾಡಿಸಬೇಕು. ತನ್ನ ಜೀವಿತದ ಅವಧಿಯಲ್ಲಿ ಒಂದು ಸಾರಿ ಗಯಾಕ್ಕೆ ಹೋಗಿ ವಿಷ್ಣುಪಾದ ಮತ್ತು ಅಕ್ಷಯ ವಟವೃಕ್ಷದಡಿಯಲ್ಲಿ ಪಿಂಡ ಪ್ರದಾನ ಮಾಡುವುದರಿಂದ ಸುಪುತ್ರ ನೆನಸಿಕೊಳ್ಳುತ್ತಾನೆ ಎಂದು ಶಾಸ್ತ್ರಗಳು ತಿಳಿಸುತ್ತವೆ. ಅನೇಕ ಮಕ್ಕಳಲ್ಲಿ ಯಾರಾದರೊಬ್ಬರು ಗಯಾ ಶ್ರಾದ್ಧ ಮಾಡಿದರೆ, ಪಿತೃಗಳಿಗೆ ಸದ್ಗತಿ ಸಿಕ್ಕುವುದೆಂದು ಶಾಸ್ತ್ರಗಳು ಒತ್ತು ಕೊಡುತ್ತದೆ. ಅಲ್ಲದೆ ಗಯಗೆ ಹೋಗಿ ಪಿಂಡ ಪ್ರದಾನ ಮಾಡಿ ತನ್ನ ಜೀವನವನ್ನು ಸಾರ್ಥಕ ಮಾಡಿಕೊಳ್ಳಬೇಕೆಂದು ಪುರಾಣಗಳು ಹೇಳುತ್ತವೆ. ಗಯಾ ಶ್ರಾದ್ಧವನ್ನು ಮಾಡಿದರೆ, ಅವರಿಗೆ ಪುನಃ ಅವರಿಗಾಗಿ ಶ್ರಾದ್ಧವನ್ನೇ ಮಾಡುವ ಅಗತ್ಯವಿಲ್ಲವೆಂದು ಗಯಾ ಮಹಿಮೆಯಲ್ಲಿ ವರ್ಣಿತವಾಗಿದೆ. ಆದರೆ ವ್ಯಕ್ತಿಯು ಜನ್ಮ ನೀಡಿದವರಿಗೆ ಕೃತಜ್ಞತೆಯ ಕುರುಹಾಗಿ, ತನ್ನ ಆತ್ಮೋದ್ಧಾರಕ್ಕೆ ಶ್ರಾದ್ಧ

ಮಾಡಬೇಕಾಗಿರುವುದರಿಂದ 'ವೃತಾಹ'ವನ್ನು ಯಾವಾಗಲೂ ಅತಿಕ್ರಮಿಸಕೂಡದೆಂದು ಹೇಳಲಾಗಿದೆ. ಇಲ್ಲಿಯವರೆಗೆ ಪಿತೃ ದೇವತೆಗಳನ್ನು ತೃಪ್ತಿಪಡಿಸಿ, ಶಾಶ್ವತ ಬ್ರಹ್ಮಲೋಕ ಸಿಕ್ಕುವ ಕರ್ಮದ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿದ್ದೇನೆ.

ಇನ್ನು ಮುಂದೆ ಗಯಾ ಕ್ಷೇತ್ರದ ಸ್ಥಳ ಪುರಾಣವನ್ನು ತಿಳಿದುಕೊಳ್ಳೋಣ.

ಭೂ ಮಂಡಲದಲ್ಲಿ ಒಂದು ಅತ್ಯಂತ ಪವಿತ್ರವಾದ ಸ್ಥಾನ ಒಂದಿದೆ. ಅದನ್ನು ಗಯಾ ತೀರ್ಥ ಎಂದು ಕರೆಯುತ್ತಾರೆ. ವಾಯು ಪುರಾಣದಲ್ಲಿ ಗಯಾ ಮಹಾತ್ಮೆ ಪ್ರಸ್ತಾಪಿಸಲ್ಪಟ್ಟಿದೆ. ಈ ತೀರ್ಥದಲ್ಲಿ ಕರ್ಮಾನುಷ್ಟಾನ ಮಾಡುವುದರಿಂದ ನಮಗೆ ಪುಣ್ಯ ಪ್ರಾಪ್ತಿಯಾಗಿ ನಮ್ಮ ಪಿತೃಗಳಿಗೆ ಮುಕ್ತಿ ಸಿಕ್ಕುತ್ತದೆ ಎಂದು ತಿಳಿಸಲಾಗಿದೆ. ಈ ಕ್ಷೇತ್ರದಲ್ಲಿ ಪಿತೃಗಳನ್ನು ಉದ್ದೇಶಿಸಿ ಶ್ರಾದ್ಧ ದಾನಾದಿಗಳನ್ನು ಮಾಡುವುದರಿಂದ ಪಿತೃ ದೇವತೆಗಳಿಗೆ ಅಕ್ಷಯ ಲೋಕಪ್ರಾಪ್ತವಾಗುತ್ತದೆ ಎಂದು ತಿಳಿಸಲಾಗಿದೆ. ಗಯಾ ಎನ್ನುವುದು ಒಬ್ಬ ರಾಕ್ಷಸನ ಹೆಸರಾಗಿದೆ. ಈ ದೈತ್ಯನು ಕೋಲಾಹಲ ಎಂಬ ಪರ್ವತದಲ್ಲಿ ಬ್ರಹ್ಮನನ್ನು ಕುರಿತು ತಪ್ಪಸ್ಸು ಮಾಡಿ, ಬ್ರಹ್ಮನಿಂದ ಎರಡು ವರಗಳನ್ನು ಪಡೆಯುತ್ತಾನೆ.

ನಾನು ಮೂರು ಲೋಕದಲ್ಲಿದ್ದವರೆಲ್ಲರಿಗೂ ಮಹಾ ಪವಿತ್ರನಾಗಿರಬೇಕು. ನಾನು ಸ್ಪರ್ಶ ಮಾಡಿದ ವಸ್ತುಗಳು ಜೀವಿಗಳು ಮುಕ್ತಿ ಹೊಂದಿ ವೈಕುಂಠಕ್ಕೆ ಹೋಗಬೇಕು ಎಂದು, ಬ್ರಹ್ಮನು 'ತಥಾಸ್ತು' ಎಂದು ಹೇಳಿದ. ವರಗಳ ಪ್ರಕಾರ ಇವನನ್ನು ಸ್ಪರ್ಶಿಸಿದವರೆಲ್ಲಾ ಯೋಗ್ಯರಾಗುತ್ತಿದ್ದರು. ಮುಕ್ತಿಯನ್ನು ಪಡೆಯುತ್ತಿದ್ದರು. ಯಮಲೋಕ, ಸ್ವರ್ಗ, ನರಕ ಎಲ್ಲವೂ ಬಿಕೋ ಎನಿಸಿತು. ಇದರಿಂದ ಪ್ರಕೃತಿಯ ನಿಯಮವೇ ಬದಲಾಯಿತು. ಎಲ್ಲಾ ದೇವತೆಗಳು ಬ್ರಹ್ಮನನ್ನು ಪ್ರಾರ್ಥಿಸಿದರು. ದೇವತೆಗಳು ಬ್ರಹ್ಮನ ಸಹಿತ ವಿಷ್ಣುವಿನ ಸಮೀಪ ಹೋಗಿ ಅವನನ್ನು ಪ್ರಾರ್ಥಿಸುತ್ತಾರೆ. ಆಗ ವಿಷ್ಣುವು ಬ್ರಹ್ಮನು ಒಂದು ಯಜ್ಞ ಮಾಡಬೇಕೆಂದು ಗಯಾಸುರನ ಶರೀರದಷ್ಟು ಪವಿತ್ರವಾದದ್ದು ಯಾವುದೂ ಇಲ್ಲವಾದ್ದರಿಂದ, ಆ ಯಜ್ಞ ಮಾಡಲು ಅವನ ಶರೀರ ಬೇಕೆಂದೂ ಗಯನನ್ನೇ ಕೇಳಬೇಕು ಎಂದು ಸಲಹೆ ಮಾಡಿದ. ಬ್ರಹ್ಮ ಹಾಗೆಯೇ ಮಾಡಿದ. ವಿಷ್ಣು ಭಕ್ತ ಗಯಾಸುರ, ಸಂತೋಷದಿಂದ ಒಪ್ಪಿ ಯಜ್ಞಕ್ಕೆ ತನ್ನ ಶರೀರವನ್ನು ಅರ್ಪಿಸಿದನು. ಆಗ ''ಪಂಚಕ್ರೋಶಂ ಗಯಾಕ್ಷೇತ್ರಂ, ಕ್ರೋಶಂ ಏಕಂ ಗಯಾಶಿರಃ'' ಎಂದು ಶ್ರಾದ್ಧ ವಿಧಿಯಲ್ಲಿ ಹೇಳಿರುವಂತೆ 5 ಕ್ರೋಶದವರೆಗೆ ಕೈ ಕಾಲುಗಳು ಹಬ್ಬಿದವು.





ಒಂದು ಕ್ರೋಶದವರೆಗೆ ತಲೆಮಾತ್ರ ಹಬ್ಬಿತು. ಅಂದರೆ ಸುಮಾರು 20 ಮೈಲಿ ದೂರದವರೆಗೆ ಹಬ್ಬಿತ್ತು. ಹೀಗೆ ಕೋಲಾಹಲ ಪರ್ವತದ ಉತ್ತರಕ್ಕೆ ತಲೆ, ದಕ್ಷಿಣಕ್ಕೆ ಕಾಲುಚಾಚಿ ಮಲಗಿದ ಗಯಾಸುರನ ಶರೀರದ ಮೇಲೆ, ಬ್ರಹ್ಮ ದೇವರು ಯಜ್ಞ ಪ್ರಾರಂಭಿಸಿದರು. ದರ್ಭೆಗಳನ್ನು ಅಭಿಮಂತ್ರಿಸಿ ಬ್ರಾಹ್ಮಣರನ್ನು ಸೃಷ್ಟಿ ಮಾಡಿದರು. ಬ್ರಾಹ್ಮಣರಿಗೆ ಯಜ್ಞಾದಿ ಕ್ರಿಯೆಗಳನ್ನು ಮಾಡುವ ಅಧಿಕಾರವನ್ನು ಕೊಟ್ಟರು. ಯಜ್ಞ ಪ್ರಾರಂಭವಾಯಿತು. ಗಯಾಸುರನ ಎದೆಯ ಮೇಲೆ ಯಜ್ಞ ಪ್ರಾರಂಭವಾದಾಗ, ಬೆಂಕಿಯ ಬಿಸಿ ತಾಳಲಾಗದೆ ಅಲುಗಾಡಲು ಪ್ರಾರಂಭಿಸುತ್ತಾನೆ. ಇದರಿಂದ ಯಜ್ಞದ ಪದಾರ್ಥಗಳು ಕೆಳಗೆ ಬೀಳುತ್ತವೆ.

ಆಗ ಬ್ರಹ್ಮನು ದೇವಮಯವಾದ ಶಿಲೆಯನ್ನು, ಈ ದಾನವನ ಎದೆ ಮೇಲೆ ಇಡುವಂತೆ ಯಮಧರ್ಮನಿಗೆ ಆಜ್ಞಾಪಿಸುತ್ತಾನೆ ಅಲ್ಲದೆ ಈ ಕಂಪನವು ನಿಲ್ಲುತ್ತದೆಂದು ಹೇಳುತ್ತಾನೆ. ಹೇಳಿದಂತೆ ಮಾಡಿದರೂ ಕಂಪನ ನಿಲ್ಲುವುದಿಲ್ಲ. ಎಲ್ಲಾ ದೇವತೆಗಳು ಒಟ್ಟಾಗಿ ತಮ್ಮ ಬಲವನ್ನೆಲ್ಲಾ ಹಾಕಿ ಎತ್ತಿ ಹಿಡಿದರು. ಆದರೂ ನಿಲ್ಲಲಿಲ್ಲ. ಯಜ್ಞ ಸಮಾಪ್ತಿಯಾಗಬೇಕಾದರೆ ಈ ಕಂಪನ ನಿಲ್ಲಬೇಕೆಂದು ವಿಷ್ಣುವನ್ನು ಪ್ರಾರ್ಥಿಸುತ್ತಾರೆ. ಆಗ ದೇವತೆಗಳ ದೀನ ಸ್ಥಿತಿಯನ್ನು ನೋಡಿದ ವಿಷ್ಣುವು, ತಾನೇ ಗದಾಧಾರೀ ರೂಪದಲ್ಲಿ ಧರ್ಮಶಿಲೆಯ ಮೇಲೆ ಬಂದು ನಿಂತಾಗ ಅಲುಗಾಟ ನಿಂತಿತು. ಆಗ ಆ ಗದಾಧರನು ಪ್ರಸನ್ನನಾಗಿ ಗಯಾಸುರನಿಗೆ ವರ ಕೇಳಲು ಹೇಳಿದನು. ಆಗ ಗದಾಧರನ ರೂಪಿಯಾದ ವಿಷ್ಣುವನ್ನು ಕುರಿತು, ನೀನು ನಿಜವಾಗಿ ನನಗೆ ಪ್ರಸನ್ನನಾಗಿದ್ದರೆ, ಈ ಗದಾಧರ ರೂಪದಿಂದಲೇ ನನ್ನ ಶರೀರದ ಮೇಲೆ ಪಿತೃ ಕಾರ್ಯ ನಡೆಸಲು ನಿನ್ನ ಪಾದವನ್ನಿಡು. ಈ ನನ್ನ ಶರೀರದ ಮೇಲಿರುವ ನಿನ್ನ ಪಾದದ ಗುರುತು ಇರುವ ಧರ್ಮಶಿಲೆಯ ಮೇಲೆ ಯಾರು ಪಿಂಡ ದಾನ ಮಾಡುತ್ತಾರೋ ಅವರ ಪಿತೃ ದೇವತೆಗಳಿಗೆ ಅಕ್ಷಯ ಲೋಕ ಪ್ರಾಪ್ತವಾಗಲೀ, ಇಲ್ಲಿ ದಿನನಿತ್ಯ ಪಿತೃ ಕಾರ್ಯ ನಡೆಯುತ್ತಿರಲಿ ಎಂದು ವರವನ್ನು ಕೇಳುತ್ತಾನೆ. ಗದಾಧರನು ತಥಾಸ್ತು ಎನ್ನುತ್ತಾನೆ. ಇವತ್ತಿನವರೆಗೂ ಭಗವಂತ ಗದಾಧರನ ರೂಪದಿಂದ ಗಯಾಕ್ಷೇತ್ರದಲ್ಲಿದ್ದು, ಆ ಸ್ಥಳ ವಿಷ್ಣುಪಾದ ಕ್ಷೇತ್ರವಾಗಿದ್ದು, ಪಿತೃಗಳಿಗೆ ಮುಕ್ತಿ ಕೊಡುವ ಕೃಪೆ ಮಾಡಿದ್ದಾನೆ. 'ತ್ರಿಸ್ಥಲಿ' ಯಲ್ಲಿ ಮೂರನೆಯದು ಗಯಾ. ಗಯಾ ಮಹಾತ್ಮೆ ಸಾಮಾನ್ಯದ್ದಲ್ಲ. ವಾಯು ಪುರಾಣವು ಪುರಾತನವಾದದ್ದು. ಇದರಲ್ಲಿ ಗಯಾ ಮಹಾತ್ಮೆಯನ್ನು ಕೊಡಲಾಗಿದೆ. ಮುಕ್ತಿಯನ್ನು ಸಾಧಿಸಲು ನಾಲ್ಕು ಮಾರ್ಗಗಳಲ್ಲಿ

ಮೊದಲನೆಯದು ಬ್ರಹ್ಮಜ್ಞಾನವನ್ನು ಪಡೆಯುವುದು, ಎರಡನೆಯದೇ ಗಯಾದಲ್ಲಿ ಶ್ರಾದ್ಧ ಮಾಡುವುದು, ಮೂರನೆಯದು ಒಂದು ಹಸುವಿನ ಪ್ರಾಣ ರಕ್ಷಣೆ ಮಾಡುವುದಕ್ಕೋಸ್ಕರ ತನ್ನ ಪ್ರಾಣವನ್ನೇ ಕೊಡುವುದು, ನಾಲ್ಕನೆಯದು ಕುರುಕ್ಷೇತ್ರದಲ್ಲಿ ನೆಲೆಯಾಗಿ ಇರುವುದು. ಇಂತಹದೆಲ್ಲಾ ಇರುವುದು ಗಯಾದ ವಿಷ್ಣುಪಾದ ದೇವಸ್ಥಾನದಲ್ಲಿ. ನೋಡಿದಿರಾ !! ಗಯಾ ಕ್ಷೇತ್ರದ ಮಹಿಮೆಯನ್ನು, ಇನ್ನು ಈ ಕ್ಷೇತ್ರದಲ್ಲಿ ವಾಸಿಸುವ ಬ್ರಾಹ್ಮಣರಿಗೆ ಶಾಪ ಬಂದ ವಿಷಯ ತಿಳಿಸುತ್ತೇನೆ.

(ಮುಂದುವರಿಯುವುದು.......)

**ಆರ್. ಎಸ್. ಕಾಶೀಪತಿ**

ಕುಶಾಲನಗರ


**ಮದುವೆ, ಗಣಪತಿ, ರಾಜ್ಯೋತ್ಸವ ಇನ್ನಿತರ**

**ಶುಭ ಸಮಾರಂಭಗಳಿಗೆ ಸಂಪರ್ಕಿಸಿ**

**ಜಗದೀಶ್ ಮತ್ತು ವೃಂದ**

**(ಆಕಾಶವಾಣಿ ಕಲಾವಿದರು)**

**ಭಾವಗೀತೆ, ಜನಪದ ಗೀತೆ ಮತ್ತು ಭಕ್ತಿಗೀತೆಗಳು**

**ನಂ. 602, 'ಇ' ಬಡಾವಣೆ, 10ನೇ ಮುಖ್ಯರಸ್ತೆ,**

**5ನೇ ಅಡ್ಡರಸ್ತೆ, ಜೆ. ಪಿ. ನಗರ, ಮೈಸೂರು – 570 008.**

**ದೂರವಾಣಿ : 0821 – 2371478, ಮೊಬೈಲ್ : 3184716**


## *Change of Address*

**Rudrapatna Su. Ramanathan,** M.Sc

Reserve Bank of India (Retd.)

**Shyamala Ramanathan**

No. 455, "Archana", 2nd Main, 5th Cross, RBI Layout,
J. P. Nagar 7th Phase, (Opp. to 80 Ft. Tempo Stand)
Bangalore - 560 078.





# Akhila Karnataka Brahmana Mahasabha (R.)

'Gayathri Bhavana', 3070, Gayathri Bhavana Road,
9th Main, BSK 2nd Stage, Bangalore - 560 070

## 8th State Level Brahmins' Conference

The Akhila Karnataka Brahmana Mahasabha since its inception in 1974 has been carrying out various activities through its network of over 400 federated Brahmin Institutions for the welfare of the community. It also conducting various awareness programmes of Sanghatana, Samskara, Swavalambana to make the youth aware of the necessity of Sanghatana of the community in the present juncture for mutual help and development of the community. With this in view, it is proposed to conduct 8th State Level Brahmin's Conference from 23rd to 26th of December 2004 at Bangalore. It is also proposed to establish a Ladies Hostel at Bangalore. Seeking your help and co-operation.

**B.N.V. Subramanya**

President

# ಆಪತ್ಕಾಲ ಪರಿಹಾರ ನಿಧಿ
# (Distress Relief Fund)

ಅಮೇರಿಕದಲ್ಲಿರುವ ಸಂಕೇತಿ ಮಹನೀಯರುಗಳು ಶ್ರೀ ಬಿ.ಕೆ.ಎಸ್. ಸ್ವಾಮಿಯವರ ನೇತೃತ್ವದಲ್ಲಿ ಉಭಯ ಸಂಕೇತಿಗಳ (ಕೌಶಿಕ ಮತ್ತು ಬೆಟ್ಟದಪುರ) ಅನುಕೂಲಕ್ಕಾಗಿ ಆಪತ್ಕಾಲ ಪರಿಹಾರ ನಿಧಿಯನ್ನು ಸ್ಥಾಪಿಸಿ, ಈ ವರ್ಷಕ್ಕಾಗಿ ಸುಮಾರು 50,000/- ರೂ.ಗಳನ್ನು ಕಳುಹಿಸಿದ್ದಾರೆ.

ಹೆಸರೇ ಸೂಚಿಸುವಂತೆ, ಈ ನಿಧಿಯ ಉದ್ದೇಶ ಆಪತ್ಕಾಲದಲ್ಲಿದ್ದು ಮುಖ್ಯವಾಗಿ ಅನಾರೋಗ್ಯದಿಂದ ನರಳುತ್ತಿರುವ, ಅನುಕೂಲತೆಗಳಿಲ್ಲದಿರುವ ಸಂಕೇತಿ ಬಂಧುಗಳಿಗೆ ಧನ ಸಹಾಯ ಮಾಡುವುದು. ಯಾರೊಬ್ಬರಿಗೆ 10,000/- ರೂ.ಗಳಿಗಿಂತ ಹೆಚ್ಚು ಧನ ಸಹಾಯ ಮಾಡಲಾಗುವುದಿಲ್ಲ.

ಇದರ ಉಪಯೋಗವನ್ನು ಪಡೆಯ ಬಯಸುವವರು ಆಯಾ ಸಂಘದ ಕಾರ್ಯದರ್ಶಿಯವರಿಗೆ, ಪೂರ್ಣ ಮಾಹಿತಿ ಕೊಟ್ಟು, ಇಬ್ಬರು ಸಂಕೇತಿ ಗಣ್ಯರುಗಳಿಂದ ಶಿಫಾರಸ್ಸು ಮಾಡಿಸಿ, ಅರ್ಜಿಯನ್ನು ಕಳುಹಿಸಬೇಕು. ಎರಡೂ ಸಂಘಗಳ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಸಭೆ ಸೇರಿ, ಬಂದ ಅರ್ಜಿಗಳ ಬಗ್ಗೆ ಅಂತಿಮ ನಿರ್ಧಾರವನ್ನು ತೆಗೆದುಕೊಂಡು ಸೂಕ್ತ ಧನ ಸಹಾಯವನ್ನು ಮಾಡಲಾಗುತ್ತದೆ.

| | |
|---|---|
| **ಆರ್.ಎಸ್. ಭಾಸ್ಕರ ಅವಧಾನಿ** | **ಸಿ. ಕೆ. ಮಂಜುನಾಥ,** |
| ಕಾರ್ಯದರ್ಶಿ | ಪ್ರಧಾನ ಕಾರ್ಯದರ್ಶಿ |
| ಬೆಟ್ಟದಪುರ ಸಂಕೇತಿ ಸಂಘ | ಕೌಶಿಕ ಸಂಕೇತಿ ಸಂಘ |





## ಬೆಂಗಳೂರು ಶಾಖೆಯಿಂದ

ಸಹೃದಯ ಸಂಕೇತಿ ಬಂಧುಗಳೇ,

ನಮ್ಮ ಸಂಘದ ಗಣೇಶೋತ್ಸವವನ್ನು ದಿನಾಂಕ 03.10.04ರಂದು ಅಭೂತಪೂರ್ವವಾಗಿ ನಡೆಸಿಕೊಟ್ಟ ನಿಮಗೆಲ್ಲರಿಗೂ ಅಭಿನಂದನೆಗಳು ಮತ್ತು ಕೃತಜ್ಞತೆಗಳು. 300ಕ್ಕೂ ಹೆಚ್ಚು ಸಂಕೇತಿ ಬಂಧುಗಳು ಸೇರಿದ್ದು ನಿಮ್ಮೆಲ್ಲರ ನಮ್ರ ಕಾರ್ಯಕರ್ತರಾದ ನಮ್ಮೆಲ್ಲರಿಗೂ ಅತ್ಯಂತ ಹರ್ಷದಾಯಕ ಮತ್ತು ಉತ್ಸಾಹದಾಯಕವಾಗಿದೆ. ಉತ್ಸವವನ್ನು ಎಲ್ಲರೂ ನೋಡಿ ನಲಿದಿದ್ದೀರಿ, ಆದರೂ ಭಾಗವಹಿಸದ ಬಂಧುಗಳಿಗಾಗಿ ಈ ಒಂದು ವರದಿ.

ಚಿರಂಜೀವಿಗಳಾದ ಎಸ್. ಎಂ. ಪ್ರಮೋದ್ ಮತ್ತು ಎಸ್. ಎ. ಸೌಮ್ಯ ಇವರ ಘನಪಾಠ ವೇದಘೋಷದಿಂದ ಕಾರ್ಯಕ್ರಮ ಐದು ಗಂಟೆಗೆ ಪ್ರಾರಂಭವಾಯಿತು. ಚಿ||ಗಳಾದ ಹೆಚ್. ಎಸ್. ಅರ್ಪಿತಾ ಮತ್ತು ಪೃಥುಲಾ ಇವರ ಸುಶ್ರಾವ್ಯವಾದ ಪ್ರಾರ್ಥನೆ ನಡೆಯಿತು. ಸಮಿತಿ ಸದಸ್ಯರಾದ ಶ್ರೀ ಎಸ್. ಸಿ. ಚಂದ್ರಶೇಖರರವರು ವೇದೋಕ್ತವಾಗಿ ಶ್ರೀ ಮಹಾ ಗಣಪತಿಗೆ ಷೋಡಶೋಪಚಾರ ಪೂಜೆಯನ್ನು ನೆರವೇರಿಸಿ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿದರು.

ಶಾಖಾಧ್ಯಕ್ಷರಾದ ಶ್ರೀ ಎಸ್. ಸಿ. ಮಂಜುನಾಥರವರು ಸಂಕೇತಿ ಬಂಧುಗಳನ್ನು, ಕಲಾವಿದರನ್ನು ಸ್ವಾಗತಿಸಿದರು. ನಂತರದ ಸುಮಾರು ಒಂದೂವರೆ ಗಂಟೆ ವಿ|| ಶ್ರೀ ಆರ್. ಕೆ. ಪ್ರಸನ್ನಕುಮಾರ್ ಅವರ ಸಂಗೀತ ಅತ್ಯಂತ ಮಧುರಾನುಭೂತಿಯನ್ನು ತಂದಿತು. ವಾಸ್ತವವಾಗಿ ಸುಮಾರು ಒಂದು ಗಂಟೆಯ ಕಾಲಮಿತಿಯಿದ್ದ ಕಾರ್ಯಕ್ರಮ ಸಭಿಕರ ಆದರದ ಒತ್ತಾಯದ ಮೇರೆಗೆ ಇನ್ನೂ ಅರ್ಧ ಗಂಟೆಯಷ್ಟು ಹೆಚ್ಚಿಸಬೇಕಾಯಿತು. ಶ್ರೀ ಪ್ರಸನ್ನಕುಮಾರ್‌ರವರು ಸುಪ್ರಸಿದ್ಧ ವೈಣಿಕ ದಿ|| ಆಸ್ಥಾನ ವಿದ್ವಾನ್ ಶ್ರೀ ಆರ್. ಎಸ್. ಕೇಶವ ಮೂರ್ತಿಯವರ ಸುಪುತ್ರರು ಮತ್ತು ಅವರಲ್ಲಿಯೇ ಹತ್ತಾರು ವರ್ಷಗಳ ಕಾಲ ಅಭ್ಯಾಸ ಮಾಡಿರುವವರು. ಪುಟ್ಟಪರ್ತಿಯ ಶ್ರೀ ಸಾಯಿಬಾಬಾರವರು ಇವರ ಗಾಯನವನ್ನು ಮೆಚ್ಚಿ ಒಂದು ಚಿನ್ನದ ಹಾರವನ್ನು ಬಹುಮಾನಿಸಿರುವುದನ್ನು ನಾವು ಕಾಣಬಹುದು. ಶ್ರೀಯುತರು ಮೃದಂಗ ವಿದ್ವಾಂಸರೂ ಹೌದು. ಸಹ ಗಾಯಕರಾಗಿ ಇವರ ಸುಪುತ್ರರೇ ಆದ ಚಿ|| ಆರ್. ಪಿ. ಪ್ರಶಾಂತ್ ವಂಶದ ಸಂಗೀತದ ಪರಂಪರೆಯನ್ನು ಬೆಳಗಿಸಿಕೊಂಡು

ಹೋಗುವ ಭರವಸೆಯನ್ನು ಮೂಡಿಸಿದರು. ಪಕ್ಕವಾದ್ಯದಲ್ಲಿ ಶ್ರೀ ಎಂ. ಎಸ್. ಗೋವಿಂದಸ್ವಾಮಿ - ವಯೋಲಿನ್, ಶ್ರೀ ಎನ್. ವಾಸುದೇವ್ - ಮೃದಂಗ, ಶ್ರೀ ದಯಾನಂದ ಮೋಹಿತೆ - ಘಟ ಎಲ್ಲರನ್ನೂ ರಂಜಿಸಿದರು.

ಎಲ್ಲರ ಮೆಚ್ಚುಗೆಯನ್ನು ಗಳಿಸಿದ ಸಂಗೀತ ಕಾರ್ಯಕ್ರಮದ ನಂತರ ಬಂದರು ''ಸಮಯಕ್ಕೊಂದು ಸುಳ್ಳು'' ಹೇಳುವ ರಮೇಶರಾಯರು, ಪತ್ನಿ ಮೀನಾ, ಕೇಸರಿ ವ್ಯಾಪಾರದ ನಾರಾಯಣ ಚಿಕ್ಕಪ್ಪ, ನೇರಳೇ ಶರಬತ್ತಿನ ವೆಂಕಟೇಶಯ್ಯ, ಸಾಹುಕಾರ ಬಸವಯ್ಯ ಪರಿವಾರದ ಜೊತೆಯಲ್ಲಿ. ಮುಂದಿನ ಒಂದು ಗಂಟೆ ಪ್ರೇಕ್ಷಕರೆಲ್ಲಾ ನಗೆಗಡಲಿನಲ್ಲಿ ಮುಳುಗಿಹೋದರು. ವೆಂಕಟೇಶಯ್ಯನಾಗಿ ಶ್ರೀ ಬಿ. ಎಸ್. ರಾಮಮೂರ್ತಿ, ನಾರಾಯಣ ಚಿಕ್ಕಪ್ಪನಾಗಿ ಶ್ರೀ ಎಂ. ನರಸಿಂಹನ್, ರಮೇಶರಾಯನಾಗಿ ಶ್ರೀ ಹೆಚ್. ವಿ. ನಟರಾಜ್, ಮೀನಾ ಆಗಿ ಆರ್. ಕೆ. ಗೀತಾಮಣಿ, ಸಾಹುಕಾರ ಬಸವಯ್ಯನಾಗಿ ಶ್ರೀ ಬಿ. ವಿ. ಮುರಳೀಧರ ಇವರುಗಳ ಅಭಿನಯ ಸಭಿಕರ ಮೆಚ್ಚುಗೆಗೆ ಪಾತ್ರವಾಯಿತು. ಈ ನಾಟಕದ ನಿರ್ದೇಶಕರು ಶ್ರೀ ಬಿ. ಎಸ್. ರಾಮಮೂರ್ತಿ ಅವರು. ಕಲಾವಿದರಿಗೆಲ್ಲಾ ಸನ್ಮಾನದ ನಂತರ ಕಾರ್ಯದರ್ಶಿಗಳಾದ ಶ್ರೀ ಬಿ. ಆರ್. ನರಸಿಂಹಮೂರ್ತಿಯವರಿಂದ ವಂದನಾರ್ಪಣೆ, ಗಣೇಶನಿಗೆ ಮಂಗಳಾರತಿ, ಪ್ರಸಾದ ವಿನಿಯೋಗವಾಯಿತು. ನಂತರ ಭಾರೀ ಮಳೆಯಲ್ಲಿಯೇ ಶ್ರೀ ಮಹಾಗಣಪತಿಯನ್ನು ಎಡಿಯೂರು ಕೆರೆಯಲ್ಲಿ ವಿಸರ್ಜಿಸಲಾಯಿತು.

ಈ ಅವಕಾಶ ಉಪಯೋಗಿಸಿಕೊಂಡು, ನಮ್ಮವರೇ ಆದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾ ಅಧ್ಯಕ್ಷರಾದ ಶ್ರೀ ಬಿ. ಎನ್. ವಿ. ಸುಬ್ರಹ್ಮಣ್ಯ ಅವರು ಮುಂಬರುವ 8ನೇ ಬ್ರಾಹ್ಮಣ ಸಮ್ಮೇಳನದ ಬಗ್ಗೆ ವಿವರಗಳನ್ನು ನೀಡಿದರು. ಅವರೂ ಕೂಡ ಸಂಕೇತಿ ಬಂಧುಗಳ ಈ ಸೇರ್ಪಡೆ ಬಗ್ಗೆ ದಿಗ್ಭ್ರಮೆ ವ್ಯಕ್ತಪಡಿಸಿ, ಸಮ್ಮೇಳನಕ್ಕೆ ಆದಷ್ಟು ಸಂಖ್ಯೆಯಲ್ಲಿ ಭಾಗವಹಿಸಿ, ಯಶಸ್ವಿಗೊಳಿಸಬೇಕಾಗಿ ಕೋರಿದರು.

ಕಾರ್ಯಕಾರಿ ಸಮಿತಿ ಪರವಾಗಿ

**ಎಸ್. ಸಿ. ಮಂಜುನಾಥ**

ಅಧ್ಯಕ್ಷರು





# The Bombay Sankethi Sabha

The above Sabha performed the Annual "Mahaganapathi Pooja Celebrations" at Pejawar Mutt, Mumbai on 26-09-2004.

Religious discourse delivered in Kannada by His Holiness Sri. Vishvesha Theertha Swamiji of Pejawar Mutt, which was heard with rapt attention by all. During the chanting of Mantra Pushpa and Maha Mangalarathi everybody was merged with the Lord in totality and worshipped Him in devotion and their pranams to him. The spiritual atmosphere was glorified by devotional songs by Mrs. Jayalakshmi Manjunatha, Ms. Shruthi Ramesh, Ms. Priyanka Shankaranarayan & Little Sanjay Sunilkumar. The Sabha distributed Blouse pieces to all the ladies present symbolising the Parashakti Gowramma, Mother of the Lord.

Function ended with dinner being served on Banana Leaves.

Sabha is thankful to all those who attended and taken the blessings of the Lord.

B.C. Sathyanarayana

R.G. Narayana Swamy — R.V. Srinivasa Murthy

R.V. Krishnamurthy — Mohan R. Rao

B.N. Chittaranjan

# A 'Watch'ful Eye

Mrs. Rozario was annoyed. Once again, Rekha had brought something expensive to school. Rekha was always doing that. The only child of wealthy parents, she had a great many expensive possessions, which she displayed now and then to her admiring classmates.

This time, it was an elegant watch. The teacher was worried that it could get lost or even stolen. She had warned Rekha that it was not wise to bring items that might tempt a less well-off child to be dishonest, but Rekha was stubborn. "I like superior stuff," she had said, "and my father can afford it." Mrs. Rozario could only shake her head disapprovingly. She could not confiscate Rekha's pens, paints and pencil-boxes, however unusual and attractive, since they were all things that Rekha used at school. So was the beautiful watch that gleamed on her wrist today.

Rekha took if off when it was time for PT and put it inside her desk. Normally careful about locking the desk. Rekha forgot to do so in her haste to get on the field. When she returned nearly an hour later, Rekha went straight to her place and realised in dismay that her desk was unlocked. She opened it at once and saw to her horror that her watch was missing.

Greatly upset. Rekha lost control and began to hurl accusations at her fellow students. She was certain that her watch had been stolen, and alternately begged and demanded that it be returned to her. Forty nine boys and girls loudly protested their innocence and so great was the commotion that Mrs. Rozario rushed to the scene to see what had happened. Taking in the situation at a glance, she swiftly restored order. Then, she went quietly to her table, pulled out a drawer and took out Rekha's watch. Rekha turned red as the thought of the dreadful things she had said and burst into tears. Mrs. Rozario consoled her. Later, Rekha apologised tearfully to her friends who were quick to forgive her. Rekha also promised her teacher that she would never again bring anything out of the ordinary to school.

(ಸಂಗ್ರಹ)





**With best Compliments from**

**M/s KUMAR ELECTRICALS**

**Engineers and Class I Licensed Electrical Contractors.**

**R. V. VASANTHKUMAR**

***No. 8(S), 1st Phase, 1st Stage,***
***Chandra Layout, Vijayanagar,***
***Bangalore - 560 040.***
***Ph : 080 - 23215297, 56964119***
***Fax : 080 - 23394884, 23396551 (R)***

**Pragathi Enterprises**

**Electrical Engineers & Contractors**

**B. S. N. Murthi**

**S. Saraswathi**

No. 32 "K", 11th Cross, 19th Main,
Rajajinagar,
Banglaore - 560 010.
Phone : 080 - 23321145
Mobile : 9448324336
E-mail : murthi203@yahoo.com

## Horoscope - Reading and Palm Reading

**Horoscope are calculated on the basis of sidereal system**

Predictions will be given through
planetory aspects.

**Just give your Name, Date of Birth,
Birth Time, Weekday and Birth Place.**

***For details contact :***

**H. K. SATHYAPRAKASH**
**S/o. H. S. Krishna Murthy**
**Grandson of Jagaraya Meshtru of Hanasoge**

No. 146, Raghavendra Block, 15th Main Road,
Kalidasa Layout, Near Raghavendra Mutt, Srinagar,
Bangalore - 560 050.

**Cell No. : 9886334667, 9844125411, 9845994578**

## NATURE CURE CONSULTANT

**ಪ್ರಕೃತಿ ಚಿಕಿತ್ಸಾ ಸಲಹೆಗಳಿಗೆ ಸಂಪರ್ಕಿಸಿ :**

**H. K. SATHYAPRAKASH**

No. 146, Raghavendra Block, 15th Main Road,
Kalidasa Layout, Near Raghavendra Mutt, Srinagar,
Bangalore - 560 050.

**Cell No. :**
**9886334667, 9844125411, 9845994578**





## PRITHVI COMPUTER NETWORKS

**Personal Computer (PC) Assembly, Computer
Networking, AMCs for
Computer Labs / Institutions are done.**

***For more details contact :***

**Arun. L.**

No. 448/A, First Floor, 8th Main, 7th Cross,
Hanumanthanagar, Bangalore - 560 019.
Phone : **9845458216**
E-mail : arun177@indiatimes.com

## NATURE SURF ADVENTURERS

**Adventure sports like Trakking, Parasailing
River rafting, River Crossings, Rappling
Rock-climbing are conducted
in the weekends.**

***Contact :***

**Arun. L. - 9845458216**

**Rajesh - 9448434519**

E-mail : nature_surf@rediffmail.com